## 2011ರ ಕರ್ನಾಟಕ ಅಧಿನಿಯಮ ಸಂಖ್ಯೆ: 2

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011

## ಪ್ರಕರಣಗಳ ಪಟ್ಟಿ

ಪ್ರಕರಣಗಳು:


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕೌನ್ಸಿಲಿಂಗ್ ಮೂಲಕ ಪ್ರಾರಂಭಿಕ ನೇಮಕಾತಿ, ವರ್ಗಾವಣೆ ಅಥವಾ ಬಡ್ತಿ
4. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಾಧಿಕಾರಿಗಳು ಅಥವಾ ಇತರೆ ಸಿಬ್ಬಂದಿಗಳ ಕಡ್ಡಾಯ ನೇಮಕಾತಿ
5. ಸೂಕ್ತ ಹುದ್ದೆಗೆ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರ ಕಡ್ಡಾಯ ನೇಮಕಾತಿ ಅಥವಾ ವರ್ಗಾವಣೆ ಅಥವಾ ಬಡ್ತಿ
6. ಸಾರ್ವಜನಿಕ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ
7. ದಂಡಗಳು
8. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ
9. ತೊಂದರೆಗಳನ್ನು ನಿವಾರಿಸಲು ಅಧಿಕಾರ
10. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ
11. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ
12. ನಿಯಮಗಳ ರಚನಾಧಿಕಾರ
13. ತಾತ್ಕಾಲಿಕ ಉಪಬಂಧಗಳು

ಅನುಸೂಚಿ – I

ಅನುಸೂಚಿ – II


* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2011ರ ಅಧಿನಿಯಮ ಸಂಖ್ಯೆ 2.–** ಈ ಮುಂದಿನ ಉದ್ದೇಶಗಳನ್ನು ಎಂದರೆ,–

(ಎ) ಕೌನ್ಸಿಲಿಂಗ್‌ನ ಪ್ರಕ್ರಿಯೆಯ ಮೂಲಕ ವರ್ಗಾವಣೆಯಲ್ಲಿ ಪಾರದರ್ಶಕತೆ ತರುವುದು;

(ಬಿ) ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಯ ಸಂಬಂಧದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಸೇವಾ ವರ್ಷಗಳನ್ನು ಖಚಿತಪಡಿಸುವುದು;

(ಸಿ) ವಿಶೇಷಜ್ಞರ ಅಥವಾ ಹಿರಿಯ ವಿಶೇಷಜ್ಞರ ಕೆಲಸವನ್ನು ಅವರ ವಿದ್ಯಾರ್ಹತೆಗೆ ಅನುಗುಣವಾಗಿರುವುದನ್ನು ನಿಶ್ಚಿತಗೊಳಿಸುವುದು,

– ಇವುಗಳನ್ನು ಸಾಧಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೆಯೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಯುಷ್ ಇಲಾಖೆಯಲ್ಲಿಯ ವೈದ್ಯಾಧಿಕಾರಿಗಳು ಹಾಗೂ ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ:01, ಕಡತ ಸಂಖ್ಯೆ:ಸಂವ್ಯಶಾಇ 3 ಶಾಸನ 2011)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೇ ನಮೂದನೆಯಡಿಯಲ್ಲಿ ಬರುತ್ತದೆ.)

* * * *

सत्यमेव जयते

**2011ರ ಕರ್ನಾಟಕ ಅಧಿನಿಯಮ ಸಂಖ್ಯೆ: 2**

(2011ರ ಫೆಬ್ರವರಿ ಮೂರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011

(2011ರ ಫೆಬ್ರವರಿ ಒಂದನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸಿ, ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯು ಲಭ್ಯವಾಗುವಂತೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸಿ, ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯು ಲಭ್ಯವಾಗುವಂತೆ ಮಾಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ನೇಮಕ" ಎಂದರೆ, ನೇರ ನೇಮಕಾತಿ ಮೂಲಕ ಅಥವಾ ವಿಲೀನಗೊಳಿಸುವ ಮೂಲಕ ಅಥವಾ ಬಡ್ತಿಯ ಮೂಲಕ ಅಥವಾ ವೃಂದ ಬದಲಾವಣೆಯ ಮೂಲಕ ಮಾಡಿದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ನೇಮಕ;

(ಬಿ) "ನೇಮಕಾತಿ ಪ್ರಾಧಿಕಾರ" ಎಂದರೆ, ಸಂಬಂಧಿಸಿದ ವೃಂದಗಳಿಗೆ ನೇಮಕ ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ) "ಸಕ್ಷಮ ಪ್ರಾಧಿಕಾರ" ಎಂದರೆ, ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ ಆದೇಶಗಳನ್ನು ಹೊರಡಿಸಲು ಸಕ್ಷಮವಾದ ಪ್ರಾಧಿಕಾರ;

(ಡಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಇ) "ಸರ್ಕಾರಿ ಆಸ್ಪತ್ರೆ" ಎಂದರೆ ಜಿಲ್ಲಾ ಆಸ್ಪತ್ರೆಗಳು, ಇತರ ದೊಡ್ಡ ಆಸ್ಪತ್ರೆಗಳು, ನಗರ ಕುಟುಂಬ ಕಲ್ಯಾಣ ಕೇಂದ್ರ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ತಾಲ್ಲೂಕು ಮಟ್ಟದಲ್ಲಿಯ ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಕೇಂದ್ರ, ಸಂಚಾರಿ ಆರೋಗ್ಯ ಘಟಕ, ಸಂಚಾರಿ ಟ್ರೈಬಲ್ ಘಟಕ, ಹೆರಿಗೆ ಕೇಂದ್ರ ಮತ್ತು ಆಯುಷ್ ಆಸ್ಪತ್ರೆ ಅಥವಾ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಯಾವುದೇ ಹೆಸರಿನಿಂದ ಕರೆಯಲ್ಪಡುವ ಮತ್ತು ಯಾವುದೇ ವೈದ್ಯಕೀಯ ಪದ್ಧತಿಗೆ ಸಂಬಂಧಿಸಿದ ಯಾವುದೇ ಸಂಸ್ಥೆ, ಕೇಂದ್ರ ಅಥವಾ ಇತರ ಕೇಂದ್ರ ಇವುಗಳನ್ನು ಒಳಗೊಳ್ಳುತ್ತದೆ;

(ಎಫ್) "ಸರ್ಕಾರಿ ಸಂಸ್ಥೆ" ಎಂದರೆ ಮತ್ತು ಇದು ಒಂದು ತರಬೇತಿ ಕೇಂದ್ರ, ಒಂದು ಆಡಳಿತ ಕಚೇರಿ ಅಥವಾ ಯಾವುದೇ ವೈದ್ಯಕೀಯ ಪದ್ಧತಿಗೆ ಸಂಬಂಧಿಸಿದ, ರಾಜ್ಯ ಸರ್ಕಾರವು ಸ್ಥಾಪಿಸಿದ, ಮತ್ತು ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವುದೇ ಇತರ ಸಂಸ್ಥೆಗಳು ಇವುಗಳನ್ನು ಒಳಗೊಳ್ಳುತ್ತದೆ;

(ಜಿ) "ವೈದ್ಯಾಧಿಕಾರಿ" ಎಂದರೆ, ಅನುಸೂಚಿ – I ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಿದ ಒಬ್ಬ ವೈದ್ಯಾಧಿಕಾರಿ;

(ಎಚ್) "ಇತರ ಸಿಬ್ಬಂದಿ" ಎಂದರೆ, ಅನುಸೂಚಿ – II ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಿದ ಒಬ್ಬ ವ್ಯಕ್ತಿ;

(ಐ) "ಕೌನ್ಸಿಲಿಂಗ್ ಪ್ರಕ್ರಿಯೆ" ಎಂದರೆ, ನೇಮಕಾತಿಗಾಗಿ ಅಥವಾ ವರ್ಗಾವಣೆಗಾಗಿ ಪರಿಗಣಿಸಿರುವ ವ್ಯಕ್ತಿಗೆ ಆತನು ಕೆಲಸ ಮಾಡಿದ ಸ್ಥಳ ಅಥವಾ ವಲಯದಲ್ಲಿ ಆತನು ಸಲ್ಲಿಸಿದ ಸೇವೆಯ ಅವಧಿಯ ಆಧಾರದ ಆದ್ಯತೆಯ ಮೇಲೆ ಮತ್ತು ನಿಯಮಿಸಬಹುದಾದ ಅಂಥ ಇತರ ಅರ್ಹತೆಯ ಮೇಲೆ, ಸ್ಥಳ ಅಥವಾ ಹುದ್ದೆಯನ್ನು ಆಯ್ಕೆ ಮಾಡಲು ಒಬ್ಬ ವ್ಯಕ್ತಿಗೆ ಅವಕಾಶವನ್ನು ನೀಡುವ ಪ್ರಕ್ರಿಯೆ;

(ಜೆ) "ಪ್ರಾಜೆಕ್ಟ್ ಹುದ್ದೆ" ಎಂದರೆ, ವಿದೇಶಿ ಏಜೆನ್ಸಿಯಾಗಲೀ ಅಥವಾ ಭಾರತ ಸರ್ಕಾರವಾಗಲೀ ನೀಡಿದ ನೆರವಿನ ಅಡಿಯಲ್ಲಿ ನಿರ್ದಿಷ್ಟ ಉದ್ದೇಶ ಮತ್ತು ನಿರ್ದಿಷ್ಟ ಅವಧಿಗಾಗಿ ಸೃಜಿಸಿದ ಒಂದು ಹುದ್ದೆ;

(ಕೆ) "ಗ್ರಾಮೀಣ ಪ್ರದೇಶ" ಎಂದರೆ, ನಗರ ಪ್ರದೇಶ ಆಗಿರದ ಒಂದು ಪ್ರದೇಶ;

(ಎಲ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(ಎಂ) "ಹಿರಿಯ ವಿಶೇಷಜ್ಞ" ಎಂದರೆ, ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೊಮೊ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ಹಿರಿಯ ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ವೈದ್ಯಾಧಿಕಾರಿ;

(ಎನ್) "ವಿಶೇಷಜ್ಞ" ಎಂದರೆ, ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೊಮೊ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ವೈದ್ಯಾಧಿಕಾರಿ;

(ಒ) "ವರ್ಗಾವಣೆ" ಎಂದರೆ, ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಕೆಲಸದ ಒಂದು ಸ್ಥಳದಿಂದ ಇನ್ನೊಂದು ಕೆಲಸದ ಸ್ಥಳಕ್ಕೆ ನಿಯೋಜಿಸುವುದು;

(ಪಿ) "ನಗರ ಪ್ರದೇಶ" ಎಂದರೆ, ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ಅಥವಾ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಇತರ ಅಧಿಸೂಚಿತ ಪ್ರದೇಶಗಳ ಮಿತಿಗಳೊಳಗೆ ಇರುವ ಯಾವುದೇ ಪ್ರದೇಶ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಮೇಲೆ ಅಧಿಸೂಚಿಸಿದ ಪ್ರದೇಶಗಳ ಪರಿಮಿತಿಗಳಿಂದ ಅಂಥ ದೂರದವರೆಗೆ ಇರುವ ಪ್ರದೇಶ;

(ಕ್ಯೂ) "ವಲಯ – ಎ" ಎಂದರೆ, ಜಿಲ್ಲಾ ಕೇಂದ್ರಗಳಲ್ಲಿರುವ ನಗರಸಭೆ ಅಥವಾ ಪುರಸಭೆಯ ಪರಿಮಿತಿಯೊಳಗೆ ಬರುವ ಪ್ರದೇಶ;

(ಆರ್) "ವಲಯ – ಬಿ" ಎಂದರೆ, ಜಿಲ್ಲಾ ಕೇಂದ್ರಗಳಲ್ಲಿರುವ ನಗರಸಭೆಯನ್ನು ಹೊರತುಪಡಿಸಿ ಇತರ ನಗರಸಭೆ, ಪಟ್ಟಣ ಪುರಸಭೆಗಳ ಅಥವಾ ಪಟ್ಟಣ ಪಂಚಾಯತಿಯ ಪರಿಮಿತಿಯೊಳಗೆ ಬರುವ ನಗರ ಪ್ರದೇಶ ಮತ್ತು ನಗರ ಪ್ರದೇಶಗಳೆಂದು ಅಧಿಸೂಚಿಸಿದ ಪ್ರದೇಶಗಳು;

**3. ಕೌನ್ಸಿಲಿಂಗ್ ಮೂಲಕ ಪ್ರಾರಂಭಿಕ ನೇಮಕಾತಿ, ವರ್ಗಾವಣೆ ಅಥವಾ ಬಡ್ತಿ.–** ಈ ಅಧಿನಿಯಮದಡಿಯಲ್ಲಿ ವೈದ್ಯಾಧಿಕಾರಿಗಳು ಅಥವಾ ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ, ವರ್ಗಾವಣೆ ಅಥವಾ ಬಡ್ತಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಡೆಸುವ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮಾಡತಕ್ಕದ್ದು:

ಪರಂತು, ಕೌನ್ಸಿಲಿಂಗ್‌ನ ಪ್ರಕ್ರಿಯೆಯ ಮೂಲಕ ಮಾಡುವ ವರ್ಗಾವಣೆಗಳಿಗೆ ಸಂಬಂಧಿಸಿದ ಉಪಬಂಧಗಳು, ಪ್ರಾಜೆಕ್ಟ್ ಹುದ್ದೆಗಳೆಂದು ಗುರುತಿಸಲ್ಪಡುವ ಹುದ್ದೆಗಳಿಗೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಶಸ್ತ್ರ ಚಿಕಿತ್ಸಕ, ತರಬೇತಿ ಸಂಸ್ಥೆಯ ಪ್ರಾಂಶುಪಾಲರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ದೊಡ್ಡ ಆಸ್ಪತ್ರೆಗಳ ಅಧೀಕ್ಷಕರುಗಳ, ಜಿಲ್ಲಾ ಆಯುಷ್ ಅಧಿಕಾರಿ ಹಾಗೂ ಆಯುಷ್ ಇಲಾಖೆಯ ಉಪ ನಿರ್ದೇಶಕರುಗಳ ಹುದ್ದೆಗಳಿಗೆ ಅನ್ವಯವಾಗತಕ್ಕದ್ದಲ್ಲ.

**4. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಾಧಿಕಾರಿಗಳು ಅಥವಾ ಇತರೆ ಸಿಬ್ಬಂದಿಗಳ ಕಡ್ಡಾಯ ನೇಮಕಾತಿ.–** (1) ನೇಮಕಾತಿ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರವು, ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಗೆ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿನ ಖಾಲಿ ಸ್ಥಾನಗಳು ಭರ್ತಿ ಮಾಡುವುದನ್ನು ಮೊದಲು ಖಚಿತಪಡಿಸಿಕೊಳ್ಳತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿದ್ದಂಥ ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕಕ್ಕೆ ಮೊದಲು ಗ್ರಾಮೀಣ ಪ್ರದೇಶಗಳಲ್ಲಿ ನಿಯಮಿಸಲಾದಷ್ಟು ವರ್ಷಗಳು ಸೇವೆ ಸಲ್ಲಿಸದಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಗ್ರಾಮೀಣ ಪ್ರದೇಶದಲ್ಲಿನ ಹುದ್ದೆಗೆ ವರ್ಗಾವಣೆ ಮಾಡತಕ್ಕದ್ದು:

ಪರಂತು, ಗ್ರಾಮೀಣ ಪ್ರದೇಶಕ್ಕೆ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ಕಡ್ಡಾಯ ವರ್ಗಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು ಐವತ್ತು ವರ್ಷಗಳ ವಯಸ್ಸನ್ನು ಮೀರಿದ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದಲ್ಲ.

(3) ಕಡ್ಡಾಯ ಗ್ರಾಮೀಣ ಸೇವೆಯನ್ನು ನಿಯಮಿಸಲಾದಂಥ ಹುದ್ದೆಯ ಸಂಬಂಧದಲ್ಲಿ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಗೆ ಯಾವುದೇ ಖಾಲಿ ಸ್ಥಾನವು ಲಭ್ಯವಾಗದಿದ್ದಲ್ಲಿ, ಗ್ರಾಮೀಣ ಸೇವೆಗೆ ನಿಯಮಿಸಲಾದಷ್ಟು ವರ್ಷಗಳನ್ನು ಪೂರ್ಣಗೊಳಿಸಿರುವಂಥ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು 'ಬಿ' ವಲಯದಲ್ಲಿನ ಮತ್ತೊಂದು ಸ್ಥಳಕ್ಕೆ ವರ್ಗಾವಣೆ ಮಾಡುವ ಮೂಲಕ ಹಾಗೂ ಬಿ ವಲಯದಲ್ಲಿ ಯಾವುದೇ ಖಾಲಿ ಸ್ಥಾನವು ಲಭ್ಯವಿಲ್ಲದಿದ್ದಲ್ಲಿ, ಬಿ ವಲಯದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದಂಥ ವ್ಯಕ್ತಿಯನ್ನು ನಗರ ಪ್ರದೇಶದ ಎ ವಲಯಕ್ಕೆ ವರ್ಗಾವಣೆ ಮಾಡುವ ಮೂಲಕ ಖಾಲಿ ಸ್ಥಾನವನ್ನು ಸೃಜಿಸಬಹುದು.

**5. ಸೂಕ್ತ ಹುದ್ದೆಗೆ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರ ಕಡ್ಡಾಯ ನೇಮಕಾತಿ ಅಥವಾ ವರ್ಗಾವಣೆ ಅಥವಾ ಬಡ್ತಿ.–** (1) ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮಾ ಹೊಂದಿರುವ ವಿಶೇಷಜ್ಞ ಅಥವಾ ಹಿರಿಯ ವಿಶೇಷಜ್ಞರನ್ನು, ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೋಮಾ ಹೊಂದಿರುವಂಥವನ ವಿಷಯಕ್ಕೆ ಅಥವಾ ತಜ್ಞತೆಗೆ ಸಂಬಂಧಿಸಿದ ಅಥವಾ ಅನುರೂಪವಾದ ವಿಶೇಷಜ್ಞರ ಹುದ್ದೆಯೆಂದು ಗುರುತಿಸದಿರುವಂಥ ಹುದ್ದೆಯಲ್ಲಿನ ಕಾರ್ಯಕ್ಕೆ ನಿಯೋಜಿಸತಕ್ಕದ್ದಲ್ಲ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.

(2) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರು ಹೊಂದಿರುವಂಥ ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೋಮಾದ ತಜ್ಞತೆಗೆ, ಗುರುತಿಸದಿರುವಂಥ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಂಥ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರನ್ನು ಅವರುಗಳು ಹೊಂದಿರುವ ವಿಶೇಷ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಗುರುತಿಸಲಾದ ಹುದ್ದೆಗೆ ವರ್ಗಾವಣೆ ಮಾಡತಕ್ಕದ್ದು:

ಪರಂತು, ಈ ಪ್ರಕರಣದ ಉಪಬಂಧವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಜಿಲ್ಲಾ ಶಸ್ತ್ರ ಚಿಕಿತ್ಸಕ, ತರಬೇತಿ ಸಂಸ್ಥೆಗಳ ಪ್ರಾಂಶುಪಾಲರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಜಿಲ್ಲಾ ಮಟ್ಟದ ಕಾರ್ಯಕ್ರಮ ಅಧಿಕಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ದೊಡ್ಡ ಆಸ್ಪತ್ರೆಗಳ ಅಧೀಕ್ಷಕರುಗಳ ಹುದ್ದೆಗಳಿಗೆ ಅನ್ವಯಿಸತಕ್ಕದ್ದಲ್ಲ.

**6. ಸಾರ್ವಜನಿಕ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ.–** (1) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಒಂದು ಪ್ರದೇಶ ಅಥವಾ ವಲಯದಲ್ಲಿಯ ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ, ನಿಯಮಿಸಲಾದ ನಿರಂತರ ವರ್ಷಗಳನ್ನು ಪೂರೈಸಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಆ ಪ್ರದೇಶ ಅಥವಾ ಹುದ್ದೆಯಲ್ಲಿ ದೀರ್ಘಾವಧಿ ಸೇವೆ ಸಲ್ಲಿಸಿರುವಂಥ ಮತ್ತು ನಿಯಮಿಸಬಹುದಾದ ಅಂಥ ಇತರ ಮಾನದಂಡಗಳ ಮೇಲೆ ವ್ಯಕ್ತಿಗಳಿಗೆ ಆದ್ಯತೆಯನ್ನು ನೀಡಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಈ ಮುಂದಿನ ಕ್ರಮದಲ್ಲಿ, ಎಂದರೆ,–

(1) ಗ್ರಾಮೀಣ ಪ್ರದೇಶ;

(2) ನಗರ ಪ್ರದೇಶ ಮತ್ತು ಅಲ್ಲಿಯ ವಲಯ – ಬಿ;

(3) ನಗರ ಪ್ರದೇಶದಲ್ಲಿಯ ವಲಯ – ಎ,

– ಇವುಗಳಲ್ಲಿಯ, ಮತ್ತೊಂದು ಸರ್ಕಾರಿ ಆಸ್ಪತ್ರೆ ಅಥವಾ ಅದೇ ಪ್ರದೇಶ ಅಥವಾ ವಲಯ ಅಥವಾ ಯಾವುದೇ ಇತರ ಪ್ರದೇಶ ಅಥವಾ ವಲಯ ಸರ್ಕಾರಿ ಸಂಸ್ಥೆಗೆ ವರ್ಗಾವಣೆ ಮಾಡಬಹುದು:

ಪರಂತು, ವರ್ಷಾವಧಿಯಲ್ಲಿ ಅಂಥ ವರ್ಗಾವಣೆಯ ಒಟ್ಟು ಸಂಖ್ಯೆಯು ಅದೇ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಖ್ಯಾ ಬಲದ ಶೇಕಡಾ ಐದರಷ್ಟನ್ನು ಮೀರತಕ್ಕದ್ದಲ್ಲ.

सत्यमेव जयते

(2) ಅಮಾನತ್ತಿನಿಂದ ಮರುನೇಮಕಾತಿ ಮಾಡುವಾಗ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು, ಅವರು ಅಮಾನತ್ತಿಗಿಂತ ಮೊದಲು ಕಾರ್ಯ ನಿರ್ವಹಿಸುತ್ತಿದ್ದ ಪ್ರದೇಶ ಅಥವಾ ವಲಯಕ್ಕಿಂತ ಉನ್ನತವಾದ ಪ್ರದೇಶ ಅಥವಾ ವಲಯಕ್ಕೆ ನಿಯೋಜಿಸತಕ್ಕದ್ದಲ್ಲ.

**7. ದಂಡಗಳು.–** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸಕ್ಷಮ ಪ್ರಾಧಿಕಾರ ಅಥವಾ ಯಾವೊಬ್ಬ ಸರ್ಕಾರಿ ನೌಕರನು ನಿಯೋಜನೆ ಅಥವಾ ನೇಮಕಾತಿ ಅಥವಾ ವರ್ಗಾವಣೆಯ ಆದೇಶವನ್ನು ಮಾಡಿದ್ದರೆ, ಸಂದರ್ಭಾನುಸಾರ ಅಂಥ ಸಕ್ಷಮ ಪ್ರಾಧಿಕಾರ ಅಥವಾ ಸರ್ಕಾರಿ ನೌಕರನು ಸಿವಿಲ್ ಸೇವಕರಿಗೆ ಅನ್ವಯಿಸುವಂಥ ಶಿಸ್ತು ನಿಯಮಾವಳಿ ಅಡಿಯಲ್ಲಿ ಶಿಸ್ತಿನ ಕ್ರಮಕ್ಕೆ ಗುರಿಯಾಗತಕ್ಕದ್ದು.

**8. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**9. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

**10. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದನ್ನು ಸೇರಿಸಬಹುದು, ಮಾರ್ಪಡಿಸಬಹುದು ಅಥವಾ ತೆಗೆದುಹಾಕಬಹುದು.

**11. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಕೈಗೊಳ್ಳಲು ಅವಕಾಶವಿರತಕ್ಕದ್ದಲ್ಲ.

**12. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದ ತರುವಾಯ ನಿಯಮವನ್ನು ರಚಿಸಿದ ಕಾರಣಗಳನ್ನು ನಿರ್ದಿಷ್ಟವಾಗಿ ತಿಳಿಸುವ ಹೇಳಿಕೆಯೊಂದನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು (3)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದ ಅಡಿಯಲ್ಲಿ ಅದು ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

**13. ತಾತ್ಕಾಲಿಕ ಉಪಬಂಧಗಳು.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಹಾಗೂ ಯಾವ ವಿಷಯಗಳ ಮುಂದುವರಿಕೆಗಾಗಿ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆಯೋ ಅಥವಾ ಉಪಬಂಧ ಕಲ್ಪಿಸಲಾಗಿದೆಯೋ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 ರ (1990ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಗಳು ಅವು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯದಿಂದ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ಅಥವಾ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕದಿಂದ ರದ್ದಾದ ಹೊರತು ಮತ್ತು ರದ್ದಾಗುವವರೆಗೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಅವುಗಳನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ರಚಿಸಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಿಸಿದ್ದರೆ, ಹೇಗೋ ಹಾಗೆ ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

## ಅನುಸೂಚಿ – I

**(2(ಜಿ), (ಎಲ್) ಪ್ರಕರಣ ಮತ್ತು 10ನೇ ಪ್ರಕರಣ ನೋಡಿ)**

**"ವೈದ್ಯಾಧಿಕಾರಿ ಹುದ್ದೆ"ಯ ಅರ್ಥ ವ್ಯಾಪ್ತಿಯಡಿಯಲ್ಲಿ ಬರುವ ಹುದ್ದೆಗಳು**

| ಕ್ರಮ ಸಂಖ್ಯೆ | ಹುದ್ದೆಗಳ ವರ್ಗ |
|---|---|
| 1. | ಹಿರಿಯ ವಿಶೇಷಜ್ಞ/ವಿಶೇಷಜ್ಞ/ಉಪಮುಖ್ಯ ವೈದ್ಯಾಧಿಕಾರಿ/ಹಿರಿಯ ವೈದ್ಯಾಧಿಕಾರಿ |
| 2. | ಸಾಮಾನ್ಯ ಕರ್ತವ್ಯನಿರತ ವೈದ್ಯಾಧಿಕಾರಿ/ವೈದ್ಯ – ಶ್ರೇಣಿ I (ಆಯುರ್ವೇದ/ಯುನಾನಿ/ ಹೋಮಿಯೋಪತಿ/ ಪ್ರಕೃತಿ ಚಿಕಿತ್ಸೆ/ಸಿದ್ಧ ಮತ್ತು ಯೋಗ)/ವೈದ್ಯ – ಶ್ರೇಣಿ II (ಆಯುರ್ವೇದ/ಯುನಾನಿ/ ಹೋಮಿಯೋಪತಿ/ ಪ್ರಕೃತಿ ಚಿಕಿತ್ಸೆ/ಸಿದ್ಧ ಮತ್ತು ಯೋಗ) |
| 3. | ಮುಖ್ಯ ದಂತ ಆರೋಗ್ಯ ಅಧಿಕಾರಿ/ಹಿರಿಯ ದಂತ ಆರೋಗ್ಯ ಅಧಿಕಾರಿ/ದಂತ ಆರೋಗ್ಯ |

ಅಧಿಕಾರಿ.

## ಅನುಸೂಚಿ – II

**(2(ಎಚ್)(ಎಲ್) ಪ್ರಕರಣ ಮತ್ತು 10ನೇ ಪ್ರಕರಣ ನೋಡಿ)**

**"ಇತರ ಸಿಬ್ಬಂದಿ"ಯ ಅರ್ಥ ವ್ಯಾಪ್ತಿಯಡಿಯಲ್ಲಿ ಬರುವ ಹುದ್ದೆಗಳು**

| ಕ್ರಮ ಸಂಖ್ಯೆ | ಹುದ್ದೆಗಳ ವರ್ಗ |
|---|---|
| 1. | ಅನುಸೂಚಿ – I ರಲ್ಲಿ ಸೇರಿರುವುದನ್ನು ಹೊರತುಪಡಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಯುಷ್ ವಿಭಾಗದ ಗ್ರೂಪ್ "ಬಿ" ಸಿಬ್ಬಂದಿ. |
| 2. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಯುಷ್ ವಿಭಾಗದ ಗ್ರೂಪ್ "ಸಿ" ಸಿಬ್ಬಂದಿ. |
| 3. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಯುಷ್ ವಿಭಾಗದ ಗ್ರೂಪ್ "ಡಿ" ಸಿಬ್ಬಂದಿ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಬೋರೇಗೌಡ

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

* * * *

सत्यमेव जयते

## KARNATAKA ACT NO. 2 OF 2011

## THE KARNATAKA STATE CIVIL SERVICES (REGULATION OF TRANSFER OF MEDICAL OFFICERS AND OTHER STAFF) ACT, 2011

### Arrangement of Sections

Sections:

1. Short title and commencement
2. Definitions
3. Initial appointment, transfer or promotion to be through counseling
4. Compulsory appointment of a medical Officer or other staff in rural areas
5. Compulsory appointment or transfer or promotion of a specialist or senior specialist to appropriate post
6. Transfer of Medical Officer or Other Staff in public interest
7. Penalties
8. Act to override other laws
9. Power to remove difficulties
10. Power to amend the Schedule
11. Protection of action taken in good faith
12. Power to make rules
13. Transitory provisions

SCHEDULE - I

SCHEDULE – II

* * * *

### STATEMENT OF OBJECTS AND REASONS

**Act 2 of 2011.-** It is considered necessary to regulate transfer of Medical Officers as well as other staff in Health and Family Welfare Department and Ayush Department, so as to ensure availability of Medical officers and other staff in Government hospitals in rural areas, thereby achieving the following objectives,

namely:-

(a) Transparency in transfer through process of counseling;

(b) Ensuring minimum years of service in rural area in respect of Medical Officers and other staff;

(c) Ensuring that Specialists or Senior Specialists work in a post commensurate with their qualification.

Hence, the Bill.

(L.C.Bill No. 01 of 2011, File No:Samvyashae 03 Shasana 2011)

(Entry 41 of List II of the Seventh Schedule to the Constitution of India.)

* * * *

## KARNATAKA ACT No. 2 OF 2011

*(First Published in the Karnataka Gazette Extra-ordinary on the Third day of February, 2011)*

## THE KARNATAKA STATE CIVIL SERVICES (REGULATION OF TRANSFER OF MEDICAL OFFICERS AND OTHER STAFF) ACT, 2011

*(Received the assent of the Governor on the First day of February, 2011)*

**An Act to provide for regulation of transfer of medical officers and other staff of the department of Health and Family Welfare so as to ensure the availability of medical officers and other staff in Government hospitals in rural areas.**

Whereas, it is expedient to provide for regulation of transfer of medical officers and other staff so as to ensure the availability of medical officers and other staff in Government hospitals in rural areas and for the matters connected therewith or incidental thereto;

Be it enacted by the Karnataka State Legislature in the sixty first year of the Republic of India, as follows:-

**1. Short title and commencement.-** (1) This Act may be called the Karnataka State Civil Services (Regulation of Transfer of Medical Officers and other Staff ) Act, 2011.

(2) It shall come into force from such date as the State Government may, by notification, appoint.

**2. Definitions.-** In this Act, unless the context otherwise requires,-

(a) "appointment" means appointment by direct recruitment or absorption or promotion or by change of cadre of Medical Officer or other staff;

(b) "appointing authority" means the authority competent to make appointment to the respective cadres;

(c) "competent authority" means the authority competent to make orders of transfer of a Medical Officer or other staff;

(d) "Government" means the Government of Karnataka;

(e) "Government hospital" means and includes district hospital, other major hospital, urban family welfare center, women & child hospital, general hospital at taluk level, community health center, urban primary health center, primary health center, sub center, mobile health unit, mobile tribal unit, maternity centre and AYUSH hospital, institution, centre or any other center by whatever name called and established by the

Government belonging to any system of medicine;

(f) "Government Institution" includes a Training center, an administrative office or any other institution by whatever name called and established by the Government belonging to any system of medicine;

(g) "medical officer" means a medical officer appointed by the Appointing Authority to any of the category of posts specified in Schedule - I;

(h) "other staff' means a person appointed by the Appointing Authority to any of the category of posts specified in Schedule – II;

(i) "process of counseling" means the process of giving opportunity to a person, considered for appointment or transfer, to opt a place or post on priority which is being given based on the length of service put in by him in the place or Zone where he is working and such other criteria as may be prescribed;

(j) "project post" means a post under a project assisted either by a foreign Agency or Government of India, created for a specific objective and for a specific tenure;

(k) "rural area" means the area other than the urban areas;

(l) "schedule" means schedule appended to this Act;

(m) "senior specialist" means a medical officer who has Post Graduate Degree or Post Graduate Diploma qualification and is working as senior specialist;

(n) "specialist" means a medical officer who has Post Graduate Degree or Post Graduate Diploma qualification and is working as specialist;

(o) "transfer" means posting of a Medical Officer or other staff from one place of working to a post in another place of working;

(p) "urban area" means any area situated within the limits of a city corporation, city municipal council, town municipal council, town panchayat or other notified areas specified under the Karnataka Municipal Corporations Act, 1976 or the Karnataka Municipalities Act, 1964 and upto such distance away from the limits of the above area notified as such by the Government from time to time;

(q) "Zone-A" means urban area within the limits of a city corporation or city municipal council at a district headquarters;

(r) "Zone-B" means urban area within the limits of a city municipal council which is in a place other than a district headquarter or a town municipal council or town panchayat and areas notified as urban areas;

**3. Initial appointment, transfer or promotion to be through counseling.-** The

initial appointment, transfer or promotion of a Medical Officer or other staff under this Act, shall be done through a process of counseling conducted in such manner as may be prescribed:

Provided that the provisions relating to transfers through process of counseling shall not apply to the posts identified as project posts, the posts of District Health and Family Welfare Officer, District Surgeon, Principal of Training Institute , Joint Director, Deputy Director, Superintendent of a major hospital of Health and Family Welfare Services and District Ayush Officer and Deputy Director of Ayush Department.

**4. Compulsory appointment of a medical Officer or other staff in rural areas.-** (1) The Appointing Authority or the Competent Authority while making initial appointment or promotion of a Medical Officer or other staff to a Government Hospital or Government Institution shall ensure that vacancies in rural areas are filled in the first instance:

(2) A Medical Officer or other staff who is in service on the date of commencement of this Act and has not served for a prescribed number of years in the rural area before the date of commencement of the Act shall be transferred to a post in rural area:

Provided that the provisions relating to compulsory transfer of Medical Officer or other staff to the rural area shall not apply to a person who has attained the age of fifty years.

(3) If no vacancy is available for initial appointment or promotion, in respect of the post for which compulsory rural service is prescribed, a vacancy may be created by transfer of a Medical Officer or other staff who has completed the prescribed number of years of rural service to another place in Zone B and if no vacancy is available in Zone B a person who has served longer period in Zone B may be transferred to Zone A of urban area.

**5. Compulsory appointment or transfer or promotion of a specialist or senior specialist to appropriate post.-** (1) No Specialist or Senior Specialist with Post Graduate Degree or Diploma shall be posted or transferred to work in a post which is not identified as specialist post related or commensurate to the subject or specialisation in which he possesses Post Graduate Degree or Post Graduate diploma.

(2) Where a specialist or senior specialist who is working in a post which is not identified for the Post Graduate Degree or Post Graduate Diploma specialisation which he possesses on the date of commencement of this Act, he shall be transferred to the post identified for the specialised qualification, possessed by him:

Provided that the provision of this section shall not apply to the posts of District Health and Family Welfare Officer, District Surgeon, Principal of Training Institutes, Joint Director, Deputy Director, Programme Officer at the district level and

Superintendent of a major hospital of health and family welfare services.

**6. Transfer of Medical Officer or Other Staff in public interest.-** (1) A Medical Officer or other staff who is in service on the date of commencement of this Act and has completed the prescribed number of years of continuous service in any Government hospital or Government Institution in an area or zone may be transferred through process of counseling by giving priority to persons put in longer period of service in that area or post and considering such other criteria as may be prescribed, to another Government hospital or Government Institution in the same area or zone or to any other area or Zone in the following order, namely:-

(1) rural area;

(2) Zone - B in urban area and thereto;

(3) Zone - A in urban area.

Provided that the total number of such transfers during the year shall not exceed five percent of the number of the working strength in that cadre.

(2) A Medical Officer or other staff, on reinstatement from suspension shall not be posted to an area or zone higher than the area or zone, where he was working before suspension.

**7. Penalties.-** If, any competent authority makes or any Government servant makes an order of posting or appointment or transfer in contravention of the provisions of this Act or the rules made thereunder, such competent authority or the Government servant as the case may be, shall be liable for disciplinary action under the disciplinary rules applicable to civil servants.

**8. Act to override other laws.-** The provisions of this Act shall have effect notwithstanding anything inconsistent therewith contained in any other law for the time being in force.

**9. Power to remove difficulties.-** If any difficulty arises in giving effect to the provisions of this Act, the Government may, by order, published in the official Gazette make provisions not inconsistent with the provisions of this Act as it appears to be necessary or expedient for removing the difficulty:

Provided that no such order shall be made after the expiry of a period of three years from the date of commencement of this Act.

**10. Power to amend the Schedule.-** The Government may, by notification, add, alter or remove any of the entries specified in the Schedule.

**11. Protection of action taken in good faith.-** No suit, prosecution or other legal proceedings shall lie against any officer of the Government for anything done in good faith or intended to be done under this Act.

**12. Power to make rules.-** (1) The Government may, by notification and after previous publication, make rules to carry out the purposes of this Act.

(2) Any rule made under this Act may be made with retrospective effect and when such a rule is made, the reasons for making the rule shall be specified in a statement to be laid before both Houses of the State Legislature and subject to any modification made under sub-section (3), every rule made under this Act shall have effect as if it is enacted under this Act.

(3) Every rule made or notification issued under this Act, shall be laid as soon as may be after it is made before each House of the State Legislature, while it is in session for a total period of thirty days, which may be comprised in one session or in two or more successive sessions, and if before the expiry of the session in which it is so laid or the session immediately following both Houses agree in making any modification, in the rule or notification or decide that any rule or notification should not be made, the rule or notification shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done under that rule or notification.

**13. Transitory provisions.-** Any rule, notification, order or appointment, made or issued under the Karnataka State Civil Services Act, 1978 (Karnataka Act 14 of 1990) or otherwise providing for or relating to any of the matters for the furtherance of which this Act is enacted, before the commencement of this Act and in force on the date of commencement of this Act, to the extent they are not inconsistent with the provisions of this Act, shall continue to be in force and effective as if they are made or issued or appointed under the corresponding provisions of this Act unless and until superseded by anything done or any action taken or any rule, notification, order or appointment, made under this Act.

## SCHEDULE - I

**(See section 2 (g), (l) and section 10)**

**Posts which come under the meaning of 'Medical Officer'**

| Sl. No. | Category of Posts |
|---|---|
| 1. | Senior Specialist/Specialist/Deputy Chief Medical Officer/Senior Medical Officer. |
| 2. | General Duty Medical Officer / Physician – Grade I (Ayurveda / Unani / Homoeopathy / Naturopathy / Siddha and Yoga) / Physician – Grade II (Ayurveda / Unani / Homoeopathy / Naturopathy / Siddha and Yoga). |
| 3. | Chief Dental Health Officer / Senior Dental Health Officer / Dental |

Health Officer.

## SCHEDULE – II

**(See section 2 (h) (I) and section 10)**

**Posts which come under the meaning of 'other Staff'**

| Sl. No. | Category of Posts |
|---|---|
| 1 | Group "B" staff of Health and Family Welfare Department and AYUSH Department excluding those covered in Schedule - 1. |
| 2 | Group "C" staff of Health and Family Welfare Department and AYUSH Department. |
| 3 | Group "D" staff of Health and Family Welfare Department and AYUSH Department. |

The above translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ ಸಂಖ್ಯೆ : 2) be published in the Official Gazette under clause (3) of Article 348 of the Constitution of India.

H.R. BHARDWAJ

GOVERNOR OF KARNATAKA.

By Order and in the name of the Governor of Karnataka

G.K. BOREGOWDA

Secretary to Government

Department of Parliamentary Affairs and Legislation

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (500 ಪ್ರತಿಗಳು)

* * * *

## 2011ರ ಕರ್ನಾಟಕ ಅಧಿನಿಯಮ ಸಂಖ್ಯೆ 09

# ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ, 2010

### ಪ್ರಕರಣಗಳ ಪಟ್ಟಿ


ಪ್ರಕರಣಗಳು:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಾರ್ವಜನಿಕ ದಾಖಲೆಗಳ ಆಡಳಿತ, ನಿರ್ವಹಣೆಗೆ ಮುಂತಾದವುಗಳಿಗೆ ಸಂಬಂಧಿಸಿದ ಕಾರ್ಯಾಚರಣೆಗಳ ಸಮನ್ವಯ, ನಿಯಂತ್ರಣ ಮತ್ತು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರದ ಅಧಿಕಾರ
4. ಸಾರ್ವಜನಿಕ ದಾಖಲೆಗಳನ್ನು ರಾಜ್ಯದಿಂದ ಹೊರಕ್ಕೆ ತೆಗೆದುಕೊಂಡು ಹೋಗದಂತೆ ನಿಷೇಧಿಸುವುದು
5. ದಾಖಲೆಗಳ ಅಧಿಕಾರಿ
6. ದಾಖಲೆಗಳ ಅಧಿಕಾರಿಯ ಜವಾಬ್ದಾರಿಗಳು
7. ದಾಖಲೆಗಳ ಅಧಿಕಾರಿಯು ತನ್ನ ಅಭಿರಕ್ಷೆಯಲ್ಲಿರುವ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡು ಹೋದ, ನಾಶಪಡಿಸಿದ ಮುಂತಾದ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು
8. ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ಅಥವಾ ವಿಲೆಮಾಡುವುದು
9. ಉಲ್ಲಂಘನೆಗೆ ದಂಡನೆ
10. ಭದ್ರತೆಯ ವರ್ಗೀಕರಣವನ್ನು ಹೊಂದಿರುವ ಸಾರ್ವಜನಿಕ ದಾಖಲೆಗಳು
11. ಖಾಸಗಿ ಮೂಲಗಳಿಂದ ದಾಖಲೆಗಳ ಸ್ವೀಕೃತಿ
12. ಸಾರ್ವಜನಿಕ ದಾಖಲೆಗಳನ್ನು ನೋಡುವ ಅವಕಾಶ
13. ಪತ್ರಾಗಾರ ಸಲಹಾ ಮಂಡಳಿ
14. ಮಂಡಳಿಯ ಪ್ರಕಾರ್ಯಗಳು
15. ಪತ್ರಪಾಲನಾ ವಿಜ್ಞಾನದಲ್ಲಿ ವ್ಯಾಸಂಗ ಕ್ರಮಗಳಿಗಾಗಿ ಪ್ರಮಾಣಕಗಳು ಮತ್ತು ಮಾನಕಮಟ್ಟಗಳನ್ನು ರಚಿಸಲು ನಿರ್ದೇಶಕರ ಅಧಿಕಾರ
16. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
17. ನಿಯಮಗಳನ್ನು ರಚಿಸುವ ಅಧಿಕಾರ

18. ತೊಂದರೆ ನಿವಾರಣೆಗೆ ಅಧಿಕಾರ

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2011ರ ಅಧಿನಿಯಮ ಸಂಖ್ಯೆ 09.–** ಈ ಕೆಳಗಿನವುಗಳಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ, ಕರ್ನಾಟಕ ಸಾರ್ವಜನಿಕ ದಾಖಲೆಗಳ ಅಧಿನಿಯಮವನ್ನು ಅಧಿನಿಯಮಿತಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ,–

(ಎ) ಭಾರತೀಯ ಐತಿಹಾಸಿಕ ದಾಖಲೆಗಳ ಆಯೋಗದ ಸಲಹೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರದ ಸಾರ್ವಜನಿಕ ದಾಖಲೆಗಳ ಅಧಿನಿಯಮಕ್ಕೆ ಅನುಸಾರ ಸಾರ್ವಜನಿಕ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಒಂದು ಶಾಸನವನ್ನು, ನಿಯಮಿಸಿದ ಅವಧಿಯೊಳಗೆ, ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು;

(ಬಿ) ಕರ್ನಾಟಕ ರಾಜ್ಯದಲ್ಲಿ ದೈನಂದಿನ ಆಡಳಿತದಲ್ಲಿ ಹಾಗೂ ಸಂಶೋಧನೆಯನ್ನು ನಡೆಸುವ ವ್ಯಕ್ತಿಗಳಿಗೆ ಉಪಯೋಗವಾಗುವ ಸರ್ಕಾರಿ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದನ್ನು ಮತ್ತು ಸಂರಕ್ಷಿಸುವುದನ್ನು ಖಚಿತಪಡಿಸಬಹುದು;

(ಸಿ) ಜಿಲ್ಲಾಡಳಿತ, ಸಾರ್ವಜನಿಕ ಉದ್ದಿಮೆಗಳು, ನಿಗಮಗಳು ಅಥವಾ ಮಂಡಳಿಗಳು, ಆಯೋಗಗಳು ಅಥವಾ ಸಮಿತಿಗಳ ದಾಖಲೆಗಳ ಸೂಕ್ತ ಸಂಗ್ರಹಣೆ, ನಿರ್ವಹಣೆ, ಆಡಳಿತ ಮತ್ತು ಸಂರಕ್ಷಣೆ ಮಾಡುವುದನ್ನು ಹಾಗೂ ಐತಿಹಾಸಿಕ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ದಾಖಲೆಗಳನ್ನು ಖಾಸಗಿ ಮೂಲಗಳಿಂದ ಪಡೆಯುವುದನ್ನು, ಕೂಡ ಖಚಿತಪಡಿಸಿಕೊಳ್ಳುವುದು;

(ಡಿ) ಸಾರ್ವಜನಿಕ ದಾಖಲೆಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲು ರಾಜ್ಯ ಪತ್ರಾಗಾರ ಸಲಹಾ ಮಂಡಳಿಯನ್ನು ರಚಿಸುವುದು.

ಆದ್ದರಿಂದ ಈ ವಿಧೇಯಕ.

(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ:6, ಕಡತ ಸಂಖ್ಯೆ:ಸಂವ್ಯಶಾಇ 48 ಶಾಸನ 2009)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 12ನೇ ಹಾಗೂ 3ನೇ ಪಟ್ಟಿಯ 12ನೇ ನಮೂದನೆಗಳಡಿಯಲ್ಲಿ ಬರುತ್ತದೆ.)

* * * *

## 2011ರ ಕರ್ನಾಟಕ ಅಧಿನಿಯಮ ಸಂಖ್ಯೆ 09

(2011ರ ಫೆಬ್ರವರಿ ಒಂಬತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ, 2010

(2011ರ ಫೆಬ್ರವರಿ ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

**ರಾಜ್ಯ ಸರ್ಕಾರದ, ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ, ಶಾಸನಬದ್ಧ ಸಂಸ್ಥೆಗಳ ಮತ್ತು ನಿಗಮಗಳ, ರಾಜ್ಯ ಸರ್ಕಾರವು ಸ್ಥಾಪಿಸಿದ ಆಯೋಗಗಳು ಮತ್ತು ಸಮಿತಿಗಳ ಸಾರ್ವಜನಿಕ ದಾಖಲೆಗಳ ನಿರ್ವಹಣೆ, ಆಡಳಿತ ಮತ್ತು ಸಂರಕ್ಷಣೆಯನ್ನು ನಿಯಂತ್ರಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಹಾಗೂ ಪ್ರಾಸಂಗಿಕ ವಿಷಯಗಳಿಗೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.**

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಳಿ" ಎಂದರೆ, 13ನೇ ಪ್ರಕರಣದ (1)ನೇ ಉಪ ಪ್ರಕರಣದಡಿಯಲ್ಲಿ ರಚಿಸಲಾದ ರಾಜ್ಯ ಪತ್ರಾಗಾರ ಸಲಹಾ ಮಂಡಳಿ ;

(ಬಿ) "ನಿರ್ದೇಶಕರು" ಎಂದರೆ, ರಾಜ್ಯ ಸರ್ಕಾರವು ನೇಮಿಸಿದ ಪತ್ರಾಗಾರ ನಿರ್ದೇಶಕರು ಮತ್ತು ಇದರಲ್ಲಿ ನಿರ್ದೇಶಕರ ಕರ್ತವ್ಯಗಳನ್ನು ನೆರವೇರಿಸಲು ಸರ್ಕಾರದಿಂದ ಅಧಿಕೃತರಾದ ಯಾವೊಬ್ಬ ಅಧಿಕಾರಿಯೂ ಒಳಗೊಳ್ಳುತ್ತಾರೆ ;

(ಸಿ) "ಪತ್ರಾಗಾರದ ಮುಖ್ಯಸ್ಥರು" ಎಂದರೆ, ರಾಜ್ಯ ಪತ್ರಾಗಾರಗಳ ಪ್ರಭಾರ ಹೊಂದಿರುವ ವ್ಯಕ್ತಿ;

(ಡಿ) "ಸಾರ್ವಜನಿಕ ದಾಖಲೆಗಳು" ಎಂಬುದು,-

(i) ಯಾವುದೇ ದಾಖಲೆ, ಹಸ್ತಪ್ರತಿ ಮತ್ತು ಕಡತ ;

(ii) ಒಂದು ದಾಖಲೆಯ ಯಾವುದೇ ಮೈಕ್ರೊ ಫಿಲ್ಮ್, ಮೈಕ್ರೋಫೀಶ್ ಮತ್ತು ಪಡಿಯಚ್ಚು ಪ್ರತಿ ;

(iii) ಮೈಕ್ರೋಫಿಲ್ಮಿನಲ್ಲಿ ಒಳಗೊಂಡ ಬಿಂಬ ಅಥವಾ ಬಿಂಬಗಳನ್ನು ವಿಶಾಲಗೊಳಿಸಿ ಅಥವಾ ಹಾಗೆಯೇ ನಕಲು ತೆಗೆಯುವುದು ; ಮತ್ತು

(iv) ಯಾವುದೇ ದಾಖಲೆಗಳ ಸೃಜನಾ ಏಜೆನ್ಸಿಯ ಗಣಕಯಂತ್ರದಿಂದ ಅಥವಾ ಯಾವುದೇ ಇತರ ಸಾಧನದಿಂದ ಉತ್ಪಾದಿತವಾದ ಯಾವುದೇ ಇತರ ವಸ್ತು

– ಇವುಗಳನ್ನು ಒಳಗೊಳ್ಳುತ್ತದೆ.

(ಇ) "ದಾಖಲೆಗಳ ಸೃಜನಾ ಏಜೆನ್ಸಿ" ಎಂಬುದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ,

(i) ರಾಜ್ಯ ಸರ್ಕಾರದ ಸಂಬಂಧದಲ್ಲಿ, ರಾಜ್ಯ ಸರ್ಕಾರದ ಯಾವುದೇ ಮಂತ್ರಾಲಯ, ಇಲಾಖೆ ಅಥವಾ ಕಛೇರಿ;

(ii) ರಾಜ್ಯ ಸರ್ಕಾರದ ಪೂರ್ಣ ಅಥವಾ ಗಣನೀಯ ನಿಯಂತ್ರಣದಲ್ಲಿರುವ ಅಥವಾ ಅದರಿಂದ ಹಣಕಾಸಿನ ನೆರವು ಪಡೆಯುವ ಯಾವುದೇ ಶಾಸನ ಬದ್ಧ ಸಂಸ್ಥೆ ಅಥವಾ ನಿಗಮದ ಸಂಬಂಧದಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಯಾವುದೇ ಆಯೋಗ ಅಥವಾ ಯಾವುದೇ ಸಮಿತಿಯ ಸಂದರ್ಭದಲ್ಲಿ, ಸದರಿ ಸಂಸ್ಥೆಯ, ನಿಗಮದ, ಆಯೋಗದ ಅಥವಾ ಸಮಿತಿಯ ಕಚೇರಿಗಳು.

(ಎಫ್) "ದಾಖಲೆಗಳ ಅಧಿಕಾರಿ" ಎಂದರೆ, 5ನೇ ಪ್ರಕರಣದ (1) ಉಪ-ಪ್ರಕರಣದ ಅಡಿಯಲ್ಲಿ ದಾಖಲೆಗಳ ಸೃಜನಾ ಏಜೆನ್ಸಿಯಿಂದ ನಾಮನಿರ್ದೇಶನ ಮಾಡಿದ ಅಧಿಕಾರಿ ;

(ಜಿ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ.

**3. ಸಾರ್ವಜನಿಕ ದಾಖಲೆಗಳ ಆಡಳಿತ, ನಿರ್ವಹಣೆಗೆ ಮುಂತಾದವುಗಳಿಗೆ ಸಂಬಂಧಿಸಿದ ಕಾರ್ಯಾಚರಣೆಗಳ ಸಮನ್ವಯ, ನಿಯಂತ್ರಣ ಮತ್ತು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಅಡಿಯಲ್ಲಿನ ಸಾರ್ವಜನಿಕ ದಾಖಲೆಗಳಿಗೆ ಸಂಬಂಧಿಸಿದ ಆಡಳಿತ, ನಿರ್ವಹಣೆ, ಸಂರಕ್ಷಣೆ, ಆಯ್ಕೆ, ವಿಲೆ ಮತ್ತು ನಾಶಪಡಿಸುವಿಕೆಗೆ ಸಂಬಂಧಿಸಿದ ಕಾರ್ಯಾಚರಣೆಗಳ ಸಮನ್ವಯ, ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿರತಕ್ಕದ್ದು.

(2) ದಾಖಲೆಗಳ ಸೃಜನಾ ಏಜೆನ್ಸಿಗಳ ಸಾರ್ವಜನಿಕ ದಾಖಲೆಗಳ ಸಂಬಂಧದಲ್ಲಿ, ರಾಜ್ಯ ಸರ್ಕಾರವು, ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಿಸಬಹುದಾದಂಥ ಷರತ್ತುಗಳ ಮೇಲೆ ಪತ್ರಾಗಾರದ ನಿರ್ದೇಶಕರಿಗೆ ಈ ಕೆಳಗಿನ ಎಲ್ಲಾ ಅಥವಾ ಯಾವುವಾದರೂ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡಬಹುದು, ಎಂದರೆ :–

(ಎ) ಪತ್ರಾಗಾರಗಳ ಮೇಲ್ವಿಚಾರಣೆ, ನಿರ್ವಹಣೆ ಮತ್ತು ನಿಯಂತ್ರಣ ;

(ಬಿ) ನಿಯಮಿಸಬಹುದಾದಂಥ ಅವಧಿಯ ತರುವಾಯ ಶಾಶ್ವತ ಸ್ವರೂಪದ ಸಾರ್ವಜನಿಕ ದಾಖಲೆಗಳನ್ನು ತನ್ನಲ್ಲಿ ಇಟ್ಟುಕೊಳ್ಳಲು ಒಪ್ಪಿಕೊಳ್ಳುವುದು ;

(ಸಿ) ಸಾರ್ವಜನಿಕ ದಾಖಲೆಗಳ ಅಭಿರಕ್ಷೆ, ಬಳಕೆ ಮತ್ತು ಹಿಂದಕ್ಕೆ ಪಡೆಯುವುದು;

(ಡಿ) ಸಾರ್ವಜನಿಕ ದಾಖಲೆಗಳನ್ನು ಜೋಡಿಸಿಡುವುದು, ಸಂರಕ್ಷಣೆ ಮತ್ತು ಪ್ರದರ್ಶನ;

(ಇ) ಸಾರ್ವಜನಿಕ ದಾಖಲೆಗಳ ವಿವರಣಾ ಪಟ್ಟಿಗಳು, ಸೂಚಿಗಳು (ಇಂಡಿಸಿಸ್), ವಿಷಯಪಟ್ಟಿಗಳು (ಕ್ಯಾಟಲಾಗುಗಳು) ಮತ್ತು ಇತರ ಪರಾಮರ್ಶನಾ ಮಾಧ್ಯಮಗಳನ್ನು ತಯಾರಿಸುವುದು ;

(ಎಫ್) ದಾಖಲೆಗಳ ನಿರ್ವಹಣಾ ಪದ್ಧತಿಯ ಸುಧಾರಣೆಗಾಗಿ ಗುಣಮಟ್ಟಗಳು, ಪ್ರಕ್ರಿಯೆಗಳು ಮತ್ತು ತಂತ್ರಜ್ಞಾನಗಳನ್ನು ವಿಶ್ಲೇಷಿಸುವುದು, ಅಭಿವೃದ್ಧಿ ಪಡಿಸುವುದು, ಪ್ರೋತ್ಸಾಹಿಸುವುದು ಮತ್ತು ಸಮನ್ವಯಗೊಳಿಸುವುದು ; ಶ್ಲೇಷಿಸುವುದು, ಅಭಿವೃದ್ಧಿ ಪಡಿಸುವುದು, ಪ್ರೋತ್ಸಾಹಿಸುವುದು ಮತ್ತು ಸಮನ್ವಯಗೊಳಿಸುವುದು ;

(ಜಿ) ಪತ್ರಾಗಾರದಲ್ಲಿ ಮತ್ತು ದಾಖಲೆಗಳ ಸೃಜನಾ ಏಜೆನ್ಸಿಯಲ್ಲಿ ಸಾರ್ವಜನಿಕ ದಾಖಲೆಗಳನ್ನು ಸರಿಯಾಗಿ ನಿರ್ವಹಿಸುವಂತೆ, ಜೋಡಿಸುವಂತೆ ಮತ್ತು ಸುರಕ್ಷವಾಗಿಡುವಂತೆ ನೋಡಿಕೊಳ್ಳುವುದು ;

(ಎಚ್) ಸಾರ್ವಜನಿಕ ದಾಖಲೆಗಳ ಸಂರಕ್ಷಣೆಗಾಗಿ ಲಭ್ಯವಿರುವ ಸ್ಥಳಾವಕಾಶವನ್ನು ಉಪಯೋಗಿಸುವಂತೆ ಮತ್ತು ಸಾಧನಗಳನ್ನು ಚೆನ್ನಾಗಿ ಇಟ್ಟುಕೊಂಡು ಬರುವಂತೆ ಉತ್ತೇಜಿಸುವುದು ;

(ಐ) ದಾಖಲೆಗಳ ಸಂಕಲನ, ವರ್ಗೀಕರಣ ಮತ್ತು ವಿಲೆಯ ಬಗ್ಗೆ ಮತ್ತು ದಾಖಲೆಗಳ ನಿರ್ವಹಣೆಯ ಗುಣಮಟ್ಟಗಳು, ಪ್ರಕ್ರಿಯೆಗಳು ಮತ್ತು ತಂತ್ರಜ್ಞಾನಗಳನ್ನು ಅನ್ವಯಿಸುವುದರ ಬಗ್ಗೆ ದಾಖಲೆಗಳ ಸೃಜನಾ ಏಜೆನ್ಸಿಗಳಿಗೆ ಸಲಹೆಯನ್ನು ನೀಡುವುದು;

(ಜೆ) ಸಾರ್ವಜನಿಕ ದಾಖಲೆಗಳ ಸಮೀಕ್ಷೆ ಮತ್ತು ಪರಿವೀಕ್ಷಣೆಗಳನ್ನು ಮಾಡುವುದು ;

(ಕೆ) ಪತ್ರಾಗಾರ ಆಡಳಿತ ಮತ್ತು ದಾಖಲೆಗಳ ನಿರ್ವಹಣೆಯ ವಿವಿಧ ವಿದ್ಯಾವಿಭಾಗಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು ;

(ಎಲ್) ಯಾವುದೇ ಖಾಸಗಿ ಮೂಲದಿಂದ ದಾಖಲೆಗಳನ್ನು ಸ್ವೀಕರಿಸುವುದು ;

(ಎಂ) ಸಾರ್ವಜನಿಕ ದಾಖಲೆಗಳನ್ನು ನೋಡುವ ಅವಕಾಶವನ್ನು ನಿಯಂತ್ರಿಸುವುದು ;

(ಎನ್) ನಿಷ್ಕ್ರಿಯ ಸಂಸ್ಥೆಗಳ ದಾಖಲೆಗಳನ್ನು ಸ್ವೀಕರಿಸುವುದು ಮತ್ತು ರಾಷ್ಟ್ರೀಯ / ರಾಜ್ಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಾರ್ವಜನಿಕ ದಾಖಲೆಗಳನ್ನು ಪಡೆದುಕೊಳ್ಳುವುದಕ್ಕಾಗಿ ವ್ಯವಸ್ಥೆ ಮಾಡುವುದು ;

(ಓ) ದಾಖಲೆಗಳ ಅಧಿಕಾರಿಯಿಂದ ದಾಖಲೆಗಳ ನಿರ್ವಹಣೆ ಮತ್ತು ವಿಲೆ ಪದ್ಧತಿಗಳ ಬಗ್ಗೆ ವರದಿಗಳನ್ನು ಸ್ವೀಕರಿಸುವುದು ;

(ಪಿ) ಸಾರ್ವಜನಿಕ ದಾಖಲೆಗಳ ಅಧಿಪ್ರಮಾಣಿತ ಪ್ರತಿಗಳು ಅಥವಾ ಅವುಗಳ ಉದ್ಧೃತ ಭಾಗಗಳನ್ನು ನೀಡುವುದು ;

(ಕ್ಯೂ) ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ಅಥವಾ ವಿಲೆ ಮಾಡುವುದು ;

(ಆರ್) ಚಾರಿತ್ರಿಕ, ರಾಜ್ಯ ಅಥವಾ ರಾಷ್ಟ್ರೀಯ ಮಹತ್ವದ ಯಾವುದೇ ದಸ್ತಾವೇಜನ್ನು ಬಾಡಿಗೆಯ ಮೇಲೆ ಅಥವಾ ಖರೀದಿಸಿ ಪಡೆಯುವುದು ಅಥವಾ ಕೊಡುಗೆಯಾಗಿ ಸ್ವೀಕರಿಸುವುದು.

**4. ಸಾರ್ವಜನಿಕ ದಾಖಲೆಗಳನ್ನು ರಾಜ್ಯದಿಂದ ಹೊರಕ್ಕೆ ತೆಗೆದುಕೊಂಡು ಹೋಗದಂತೆ ನಿಷೇಧಿಸುವುದು.–** ಯಾವ ವ್ಯಕ್ತಿಯೂ ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಯಾವುವೇ ಸಾರ್ವಜನಿಕ ದಾಖಲೆಗಳನ್ನು ರಾಜ್ಯದಿಂದ ಹೊರಕ್ಕೆ ತೆಗೆದುಕೊಂಡು ಹೋಗತಕ್ಕದ್ದಲ್ಲ ಅಥವಾ ತೆಗೆದುಕೊಂಡು ಹೋಗುವಂತೆ ಮಾಡತಕ್ಕದ್ದಲ್ಲ.

**5. ದಾಖಲೆಗಳ ಅಧಿಕಾರಿ.–** (1) ಪ್ರತಿಯೊಂದು ದಾಖಲೆಗಳ ಸೃಜನಾ ಏಜೆನ್ಸಿಯು ಈ ಅಧಿನಿಯಮದಡಿಯಲ್ಲಿನ ಕರ್ತವ್ಯಗಳನ್ನು ನಿರ್ವಹಿಸಿಕೊಂಡುಹೋಗಲು ಒಬ್ಬ ಅಧಿಕಾರಿಯನ್ನು ದಾಖಲೆಗಳ ಅಧಿಕಾರಿ ಎಂದು ನಾಮನಿರ್ದೇಶನ ಮಾಡತಕ್ಕದ್ದು.

(2) ಪ್ರತಿಯೊಂದು ದಾಖಲೆಗಳ ಸೃಜನಾ ಏಜೆನ್ಸಿಯು ತಾನು ಸೂಕ್ತವೆಂದು ಭಾವಿಸಿದಂಥ ಸ್ಥಳಗಳಲ್ಲಿ ಅಂಥ ಸಂಖ್ಯೆಯ ದಾಖಲೆ ಕೊಠಡಿಗಳನ್ನು ನಿರ್ಮಿಸತಕ್ಕದ್ದು ಹಾಗೂ ಪ್ರತಿಯೊಂದು ದಾಖಲೆ ಕೊಠಡಿಯನ್ನು ಒಬ್ಬ ದಾಖಲೆಗಳ ಅಧಿಕಾರಿಯ ಪ್ರಭಾರದಡಿಯಲ್ಲಿ ಇಡತಕ್ಕದ್ದು.

**6. ದಾಖಲೆಗಳ ಅಧಿಕಾರಿಯ ಜವಾಬ್ದಾರಿಗಳು.–** (1) ದಾಖಲೆಗಳ ಅಧಿಕಾರಿಯು ಈ ಕೆಳಗಿನವುಗಳಿಗೆ ಜವಾಬ್ದಾರನಾಗಿರತಕ್ಕದ್ದು.

(ಎ) ತನ್ನ ಪ್ರಭಾರದಲ್ಲಿರುವ ಸಾರ್ವಜನಿಕ ದಾಖಲೆಗಳನ್ನು ಓರಣವಾಗಿ ಜೋಡಿಸಿಡುವುದು, ನಿರ್ವಹಿಸಿಕೊಂಡು ಬರುವುದು ಮತ್ತು ಸಂರಕ್ಷಣೆ ಮಾಡುವುದು ;

(ಬಿ) ಎಲ್ಲಾ ಸಾರ್ವಜನಿಕ ದಾಖಲೆಗಳ ನಿಯತಕಾಲಿಕ ಪುನರೀಕ್ಷಣೆ ಮಾಡುವುದು ಮತ್ತು ಅಲ್ಪಕಾಲಿಕ ಮೌಲ್ಯದ ಸಾರ್ವಜನಿಕ ದಾಖಲೆಗಳನ್ನು ನಾಶಗೊಳಿಸುವುದು;

(ಸಿ) ಶಾಶ್ವತ ಮೌಲ್ಯದ ಸಾರ್ವಜನಿಕ ದಾಖಲೆಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ರಾಜ್ಯ ಪತ್ರಾಗಾರದೊಡನೆ ಸಮಾಲೋಚಿಸಿ ಇಪ್ಪತ್ತೈದು ವರ್ಷಗಳಿಗಿಂತ ಹಳೆಯದಾದ ದಾಖಲೆಗಳ ಮೌಲ್ಯ ನಿರ್ಣಯ ಮಾಡುವುದು ;

(ಡಿ) 8ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ;

(ಇ) ರಾಜ್ಯ ಪತ್ರಾಗಾರದೊಡನೆ ಸಮಾಲೋಚಿಸಿ ಉಳಿಸಿಕೊಂಡಿರುವ ಸಾರ್ವಜನಿಕ ದಾಖಲೆಗಳಿಗೆ ಅನುಸೂಚಿಯನ್ನು ಸಂಕಲನ ಮಾಡುವುದು ;

(ಎಫ್) ನಿಯಮಿಸಬಹುದಾದಂಥ ರೀತಿಯಲ್ಲಿ ವರ್ಗೀಕರಣವಾದ ಸಾರ್ವಜನಿಕ ದಾಖಲೆಗಳನ್ನು ಕೆಳದರ್ಜೆಗೆ ಇಳಿಸುವುದಕ್ಕಾಗಿ ನಿಯತಕಾಲಿಕ ಪುನರೀಕ್ಷಣೆ ಮಾಡುವುದು ;

(ಜಿ) ದಾಖಲೆ ನಿರ್ವಹಣಾ ಪದ್ಧತಿಯ ಸುಧಾರಣೆಗಾಗಿ ಮತ್ತು ಸಾರ್ವಜನಿಕ ದಾಖಲೆಗಳ ಭದ್ರತೆಗಾಗಿ ರಾಜ್ಯಪತ್ರಾಗಾರದವರು ಕಾಲಕಾಲಕ್ಕೆ ಶಿಫಾರಸ್ಸು ಮಾಡಬಹುದಾದಂಥ ಗುಣಮಟ್ಟಗಳು, ಪ್ರಕ್ರಿಯೆಗಳು ಮತ್ತು ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ;

(ಎಚ್) ಸಾರ್ವಜನಿಕ ದಾಖಲೆಗಳ ವಾರ್ಷಿಕ ವಿಷಯಸೂಚಿಗಳ ಸಂಕಲನ ಮಾಡುವುದು ;

(ಐ) ಸಂಘಟನಾ ಚರಿತ್ರೆ ಮತ್ತು ಅದರ ವಾರ್ಷಿಕ ಪುರವಣಿಯ ಸಂಕಲನ ಮಾಡುವುದು ;

(ಜೆ) ಸಾರ್ವಜನಿಕ ದಾಖಲೆಗಳ ನಿರ್ವಹಣೆಯಲ್ಲಿ ರಾಜ್ಯ ಪತ್ರಾಗಾರಕ್ಕೆ ನೆರವು ನೀಡುವುದು;

(ಕೆ) ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ದೇಶಕರಿಗೆ ವಾರ್ಷಿಕ ವರದಿಗಳನ್ನು ಸಲ್ಲಿಸುವುದು ;

(ಎಲ್) ಯಾವುದೇ ನಿಷ್ಕ್ರಿಯ ಸಂಸ್ಥೆಯ ದಾಖಲೆಗಳನ್ನು ಸಂರಕ್ಷಣೆಗಾಗಿ ರಾಜ್ಯ ಪತ್ರಾಗಾರಕ್ಕೆ ವರ್ಗಾವಣೆ ಮಾಡುವುದು ;

(2) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ದಾಖಲೆಗಳ ಅಧಿಕಾರಿಯು ನಿರ್ದೇಶಕರ ನಿರ್ದೇಶನದಡಿಯಲ್ಲಿ ಕರ್ತವ್ಯನಿರ್ವಹಿಸತಕ್ಕದ್ದು.

**7. ದಾಖಲೆಗಳ ಅಧಿಕಾರಿಯು ತನ್ನ ಅಭಿರಕ್ಷೆಯಲ್ಲಿರುವ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡು ಹೋದ, ನಾಶಪಡಿಸಿದ ಮುಂತಾದ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು.–** (1) ದಾಖಲೆಗಳ ಅಧಿಕಾರಿಯು, ತನ್ನ ಪ್ರಭಾರದಲ್ಲಿರುವ ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡುಹೋದಾಗ, ನಾಶಪಡಿಸಿದಾಗ, ವಿರೂಪಗೊಳಿಸಿದಾಗ ಅಥವಾ ಮಾರ್ಪಡಿಸಿದಾಗ ಅಂಥ ಸಾರ್ವಜನಿಕ ದಾಖಲೆಗಳನ್ನು ಮತ್ತೆ ಪಡೆದುಕೊಳ್ಳುವುದಕ್ಕೆ ಅಥವಾ ಅದನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಸೂಕ್ತವಾದ ಕ್ರಮವನ್ನು ಕೂಡಲೇ ತೆಗೆದುಕೊಳ್ಳತಕ್ಕದ್ದು.

(2) ದಾಖಲೆಗಳ ಅಧಿಕಾರಿಯು, ತನ್ನ ಪ್ರಭಾರದಲ್ಲಿರುವ ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡುಹೋದ, ನಾಶಪಡಿಸಿದ, ವಿರೂಪಗೊಳಿಸಿದ ಅಥವಾ ವ್ಯತ್ಯಾಸಮಾಡಿದ ಬಗ್ಗೆ ಯಾವುದೇ ಮಾಹಿತಿಯನ್ನು ಮತ್ತು ತಾನು ಪ್ರಾರಂಭಿಸಿರುವ ಕ್ರಮದ ಬಗ್ಗೆ ಯಾವುದೇ ವಿಳಂಬವಿಲ್ಲದೆ ಒಂದು ಲಿಖಿತ ವರದಿಯನ್ನು ನಿರ್ದೇಶಕರಿಗೆ ಸಲ್ಲಿಸತಕ್ಕದ್ದು 7

ಮತ್ತು ನಿರ್ದೇಶಕರು ಯಾವುದಾದರೂ ನಿರ್ದೇಶನಗಳನ್ನು ನೀಡಿದ್ದರೆ, ಅವುಗಳಿಗೊಳಪಟ್ಟು ತಾನು ಅವಶ್ಯವೆಂದು ಭಾವಿಸಬಹುದಾದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(3) ದಾಖಲೆಗಳ ಅಧಿಕಾರಿಯು, ಸಾರ್ವಜನಿಕ ದಾಖಲೆಗಳನ್ನು ಮತ್ತೆ ಪಡೆಯುವ ಅಥವಾ ಅದನ್ನು ಪೂರ್ವಸ್ಥಿತಿಗೆ ತರುವ ಉದ್ದೇಶಕ್ಕಾಗಿ ಯಾವೊಬ್ಬ ಸರ್ಕಾರಿ ಅಧಿಕಾರಿಯ ಅಥವಾ ಇತರ ಯಾವುದೇ ವ್ಯಕ್ತಿಯ ನೆರವನ್ನು ಕೋರಬಹುದು ಮತ್ತು ಅಂಥ ಅಧಿಕಾರಿ ಅಥವಾ ವ್ಯಕ್ತಿಯು ದಾಖಲೆಗಳ ಅಧಿಕಾರಿಗೆ ಎಲ್ಲಾ ನೆರವನ್ನು ನೀಡತಕ್ಕದ್ದು.

**8. ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ಅಥವಾ ವಿಲೆಮಾಡುವುದು.–** (1) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ರೀತಿಯಲ್ಲಿ ಹೊರತು ಯಾವುದೇ ಸಾರ್ವಜನಿಕ ದಾಖಲೆಯನ್ನು ನಾಶಪಡಿಸತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ.

(2) ನೂರುವರ್ಷಗಳಿಗಿಂತ ಹಳೆಯದಾಗಿರುವ ಯಾವುವೇ ದಾಖಲೆಗಳನ್ನು, ಅವು ಪತ್ರಾಗಾರದ ಯಾವುದೇ ಬಳಕೆಗೆ ಉಪಯೋಗಿಸಿಕೊಳ್ಳಲಾಗದ ಹಾಗೆ ವಿರೂಪಗೊಂಡಿವೆ ಅಥವಾ ದುಸ್ಥಿತಿಯಲ್ಲಿವೆ ಎಂದು ನಿರ್ದೇಶಕರ ಅಭಿಪ್ರಾಯಪಟ್ಟ ಹೊರತು ನಾಶಪಡಿಸತಕ್ಕದ್ದಲ್ಲ.

**9. ಉಲ್ಲಂಘನೆಗೆ ದಂಡನೆ.–** 4ನೇ ಪ್ರಕರಣದ ಅಥವಾ 8ನೇ ಪ್ರಕರಣದ ಯಾವುವೆ ಉಪಬಂಧಗಳನ್ನು ಯಾರೇ ಉಲ್ಲಂಘಿಸಿದರೂ, ಅವರು ಐದು ವರ್ಷಗಳ ಅವಧಿವರೆಗಿನ ಕಾರಾವಾಸದಿಂದ ಅಥವಾ ಹತ್ತುಸಾವಿರ

ರೂಪಾಯಿಗಳವರೆಗಿನ ದಂಡದಿಂದ ಅಥವಾ ಇವೆರಡರಿಂದಲೂ ದಂಡಿತರಾಗತಕ್ಕದ್ದು.

**10. ಭದ್ರತೆಯ ವರ್ಗೀಕರಣವನ್ನು ಹೊಂದಿರುವ ಸಾರ್ವಜನಿಕ ದಾಖಲೆಗಳು.–** ಭದ್ರತೆಯ ವರ್ಗೀಕರಣವನ್ನು ಹೊಂದಿರುವ ಯಾವುವೇ ಸಾರ್ವಜನಿಕ ದಾಖಲೆಗಳನ್ನು ರಾಜ್ಯ ಪತ್ರಾಗಾರಕ್ಕೆ ವರ್ಗಾಯಿಸತಕ್ಕದ್ದಲ್ಲ.

**11. ಖಾಸಗಿ ಮೂಲಗಳಿಂದ ದಾಖಲೆಗಳ ಸ್ವೀಕೃತಿ.–** (1) ರಾಜ್ಯಪತ್ರಾಗಾರವು, ಚಾರಿತ್ರಿಕ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಯಾವುದೇ ದಾಖಲೆಯನ್ನು ಯಾವುದೇ ಖಾಸಗಿ ಮೂಲದಿಂದ ದಾನವಾಗಿ, ಖರೀದಿ ಮಾಡಿ ಅಥವಾ ಅನ್ಯಥಾ ಸ್ವೀಕರಿಸಬಹುದು.

(2) ರಾಜ್ಯ ಪತ್ರಾಗಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು (1)ನೇ ಉಪಪ್ರಕರಣದಲ್ಲಿ ಉಲ್ಲೇಖವಾದ ಯಾವುದೇ ದಾಖಲೆಯನ್ನು ಯಾವೊಬ್ಬ ನೈಜ ಸಂಶೋಧನಾ ವಿದ್ವಾಂಸರಿಗೆ ಲಭ್ಯವಾಗುವಂತೆ ಮಾಡಬಹುದು.

**12. ಸಾರ್ವಜನಿಕ ದಾಖಲೆಗಳನ್ನು ನೋಡುವ ಅವಕಾಶ.–** (1) ಮೂವತ್ತು ವರ್ಷಗಳಿಗಿಂತ ಹಳೆಯದಾದ ವರ್ಗೀಕೃತವಾಗಿಲ್ಲದ ಮತ್ತು ರಾಜ್ಯ ಪತ್ರಾಗಾರಕ್ಕೆ ವರ್ಗಾವಣೆಯಾಗಿರುವ ಎಲ್ಲಾ ಸಾರ್ವಜನಿಕ ದಾಖಲೆಗಳನ್ನು ನಿಯಮಿಸಬಹುದಾದಂಥ ವಿನಾಯಿತಿಗಳು ಮತ್ತು ನಿರ್ಬಂಧಗಳಿಗೊಳಪಟ್ಟು ಯಾವೊಬ್ಬ ನೈಜ ಸಂಶೋಧನಾ ವಿದ್ವಾಂಸರಿಗೆ ಲಭ್ಯವಾಗುವಂತೆ ಮಾಡಬಹುದು.

**ವಿವರಣೆ :–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಮೂವತ್ತು ವರ್ಷಗಳ ಅವಧಿಯನ್ನು ಸದರಿ ಸಾರ್ವಜನಿಕ ದಾಖಲೆಯನ್ನು ತೆರೆದ ವರ್ಷದಿಂದ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(2) ಯಾವುದೇ ದಾಖಲೆಗಳ ಸೃಜನಾ ಏಜೆನ್ಸಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಯಾವುದೇ ವ್ಯಕ್ತಿಯು ತನ್ನ ಅಭಿರಕ್ಷೆಯಲ್ಲಿರುವ ಯಾವುದೇ ಸಾರ್ವಜನಿಕ ದಾಖಲೆಯನ್ನು ನೋಡಲು ಅನುಮತಿಯನ್ನು ನೀಡಬಹುದು. 8

**13. ಪತ್ರಾಗಾರ ಸಲಹಾ ಮಂಡಳಿ.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ಪತ್ರಾಗಾರ ಸಲಹಾ ಮಂಡಳಿಯನ್ನು ಸ್ಥಾಪಿಸಬಹುದು.

(2) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನೊಳಗೊಂಡಿರತಕ್ಕದ್ದು, ಎಂದರೆ :–

| | | |
|---|---|---|
| (ಎ) | ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು | ಅಧ್ಯಕ್ಷರು, ಪದನಿಮಿತ್ತ ; |
| (ಬಿ) | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ –ಈ ಪ್ರತಿಯೊಂದು ಇಲಾಖೆಗಳಿಂದ ಕರ್ನಾಟಕ ಸರ್ಕಾರದ ಜಂಟಿ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬೊಬ್ಬ ಅಧಿಕಾರಿಗಳು | ಸದಸ್ಯರು, ಪದನಿಮಿತ್ತ ; |
| (ಸಿ) | ರಾಜ್ಯ ಸರ್ಕಾರವು ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮನಿರ್ದೇಶನ ಮಾಡಿದ | ಸದಸ್ಯರುಗಳು |

ಮೂವರು ವ್ಯಕ್ತಿಗಳು, ಅವರುಗಳಲ್ಲಿಒಬ್ಬರು
ವೃತ್ತಿಯಿಂದ ಪತ್ರಪಾಲಕರಾಗಿರತಕ್ಕದ್ದು,
ರಾಜ್ಯದ ಮಾನ್ಯತೆ ಪಡೆದ ಯಾವುವೇ
ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಚರಿತ್ರೆ
ವಿಭಾಗದ ಪ್ರಾಧ್ಯಾಪಕರಾಗಿರುವ ಇಬ್ಬರು

(ಡಿ) ಪತ್ರಾಗಾರದ ನಿರ್ದೇಶಕರು — ಸದಸ್ಯ-ಕಾರ್ಯದರ್ಶಿಗಳು, ಪದನಿಮಿತ್ತ

(3) (2)ನೇ ಉಪಪ್ರಕರಣದ (ಸಿ) ಖಂಡದಡಿಯಲ್ಲಿ ನಾಮನಿರ್ದೇಶಿತರಾದ ಸದಸ್ಯರುಗಳಿಗೆ ನಿಯಮಿಸಬಹುದದಾಂಥ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**14. ಮಂಡಳಿಯ ಪ್ರಕಾರ್ಯಗಳು.–** ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ :–

(ಎ) ಸಾರ್ವಜನಿಕ ದಾಖಲೆಗಳ ಆಡಳಿತ, ನಿರ್ವಹಣೆ, ಸಂರಕ್ಷಣೆ ಮತ್ತು ಬಳಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ;

(ಬಿ) ಪತ್ರಪಾಲಕರ ತರಬೇತಿಗಾಗಿ ಮಾರ್ಗದರ್ಶನಗಳನ್ನು ರಚಿಸುವುದು ;

(ಸಿ) ಖಾಸಗಿಯವರ ಅಭಿರಕ್ಷೆಯಲ್ಲಿರುವ ದಾಖಲೆಗಳನ್ನು ಅವರಿಂದ ಪಡೆದುಕೊಳ್ಳುವ ಬಗ್ಗೆ ನಿರ್ದೇಶನಗಳನ್ನು ನೀಡುವುದು ;

(ಡಿ) ನಿಯಮಿಸಬಹುದಾದಂಥ ಇತರ ವಿಷಯಗಳ ಬಗ್ಗೆ ವ್ಯವಹರಿಸುವುದು.

**15. ಪತ್ರಪಾಲನಾ ವಿಜ್ಞಾನದಲ್ಲಿ ವ್ಯಾಸಂಗ ಕ್ರಮಗಳಿಗಾಗಿ ಪ್ರಮಾಣಕಗಳು ಮತ್ತು ಮಾನಕಮಟ್ಟಗಳನ್ನು ರಚಿಸಲು ನಿರ್ದೇಶಕರ ಅಧಿಕಾರ.–** ಪತ್ರಪಾಲನಾ ವಿಜ್ಞಾನ ಮತ್ತು ಇತರ ಪೂರಕ ವಿಷಯಗಳಲ್ಲಿ ತರಬೇತಿಗೆ ಸಂಬಂಧಿತ ವ್ಯಾಸಂಗಕ್ರಮಗಳು, ಪಠ್ಯವಿಷಯಗಳು, ಮೌಲ್ಯಮಾಪನ ಮತ್ತು ಪರೀಕ್ಷೆಗಳಿಗಾಗಿ ಪ್ರಮಾಣಕಗಳು ಮತ್ತು ಮಾನಕ ಗುಣಮಟ್ಟಗಳನ್ನು ರಚಿಸುವ ಅಧಿಕಾರವನ್ನು ನಿರ್ದೇಶಕರು ಹೊಂದಿರತಕ್ಕದ್ದು.

**16. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ, ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕ್ರಮಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**17. ನಿಯಮಗಳನ್ನು ರಚಿಸುವ ಅಧಿಕಾರ.–** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವಾದರೂ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ :–

(ಎ) 3ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಡಿಯಲ್ಲಿ ಶಾಶ್ವತ ಸ್ವರೂಪದ ಸಾರ್ವಜನಿಕ ದಾಖಲೆಗಳನ್ನು ಯಾವ ಅವಧಿಯ ತರುವಾಯ ಸ್ವೀಕರಿಸಬಹುದೋ ಆ ಅವಧಿ ;

(ಬಿ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದಡಿಯಲ್ಲಿ ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸತಕ್ಕ ರೀತಿ ಮತ್ತು ಅದಕ್ಕೆ ಅನ್ವಯಿಸುವ ಷರತ್ತುಗಳು ;

(ಸಿ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದಡಿಯಲ್ಲಿ ವರ್ಗೀಕೃತ ಸಾರ್ವಜನಿಕ ದಾಖಲೆಗಳನ್ನು ಕೆಳದರ್ಜೆಗೆ ಇಳಿಸುವುದಕ್ಕಾಗಿ ನಿಯತಕಾಲಿಕ ಪುನರೀಕ್ಷಣೆಯನ್ನು ಮಾಡುವ ರೀತಿ ;

(ಡಿ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಕೆ) ಖಂಡದಡಿಯಲ್ಲಿ ಹೇಳಿರುವಂತೆ ದಾಖಲೆಗಳ ಅಧಿಕಾರಿಯು ನಿರ್ದೇಶಕರಿಗೆ ವರದಿ ನೀಡತಕ್ಕ ರೀತಿ ;

(ಇ) 8ನೇ ಪ್ರಕರಣದ (ಇ) ಉಪಪ್ರಕರಣದಡಿಯಲ್ಲಿ ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವ ಅಥವಾ ವಿಲೆ ಮಾಡತಕ್ಕ ರೀತಿ ಮತ್ತು ಅದಕ್ಕೆ ಅನ್ವಯಿಸುವ ಷರತ್ತುಗಳು ;

(ಎಫ್) 11ನೇ ಪ್ರಕರಣದ (2)ನೇ ಉಪ ಪ್ರಕರಣದಡಿಯಲ್ಲಿ ಚಾರಿತ್ರಿಕ ಅಥವಾ ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಪ್ರಾಮುಖ್ಯತೆಯುಳ್ಳ ದಾಖಲೆಗಳನ್ನು ಸಂಶೋಧನಾ ವಿದ್ವಾಂಸರುಗಳಿಗೆ ಲಭ್ಯವಾಗುವಂತೆ ಮಾಡತಕ್ಕ ರೀತಿ ಮತ್ತು ಅದಕ್ಕೆ ಅನ್ವಯಿಸುವ ಷರತ್ತುಗಳು ;

(ಜಿ) 12ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ಒಬ್ಬ ಸಂಶೋಧನಾ ವಿದ್ವಾಂಸರಿಗೆ ಸಾರ್ವಜನಿಕ ದಾಖಲೆಗಳನ್ನು ನೋಡಲು ಕೊಡುವುದಕ್ಕೆ ಅನ್ವಯಿಸುವ ವಿನಾಯಿತಿಗಳು ಮತ್ತು ನಿರ್ಬಂಧಗಳು ;

(ಎಚ್) 13ನೇ ಪ್ರಕರಣದ (3)ನೇ ಉಪಪ್ರಕರಣದಡಿಯಲ್ಲಿ ಮಂಡಳಿಯ ಸದಸ್ಯರುಗಳಿಗೆ ಸಂದಾಯವಾಗಬೇಕಾದ ಭತ್ಯೆಗಳು ;

(ಐ) 14ನೇ ಪ್ರಕರಣದ (ಡಿ) ಖಂಡದಡಿಯಲ್ಲಿ ಮಂಡಳಿಯು ತನ್ನ ಪ್ರಕಾರ್ಯಗಳನ್ನು ನೆರವೇರಿಸಬಹುದಾದ ವಿಷಯಗಳು ;

(ಜೆ) ನಿಯಮಿಸತಕ್ಕ ಅಥವಾ ನಿಯಮಿಸಬಹುದಾದ ಯಾವುವೇ ಇತರ ವಿಷಯಗಳು,

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ. ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಈ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ಸಂದರ್ಭಾನುಸಾರ ಅಂಥ

ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**18. ತೊಂದರೆ ನಿವಾರಣೆಗೆ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತಾನು ಅವಶ್ಯಕ ಅಥವಾ ಯುಕ್ತವೆಂದು ಭಾವಿಸುವಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಭಾ.ಭೀ.ಪತ್ತಾರ**

ಅಪರ ಪ್ರಾರೂಪಕಾರ ಮತ್ತು ಪದನಿಮಿತ್ತ

ಸರ್ಕಾರದ ಅಪರ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

* * * *

सत्यमेव जयते

## KARNATAKA ACT NO. 9 OF 2011

## THE KARNATAKA STATE PUBLIC RECORDS ACT, 2010

### Arrangement of Sections

Sections:

1. Short title and commencement
2. Definitions
3. Power of the State Government to co-ordinate, regulate and supervise operations connected with administration, management etc., of public records
4. Prohibition against taking of public records out of the State
5. Records Officer
6. Responsibilities of Records Officer
7. Records Officer to take appropriate action in the event of unauthorized removal, destruction etc., of Public Records in his custody
8. Destruction or disposal of public records
9. Penalty for contraventions
10. Public records bearing security classification
11. Receipt of records from private sources
12. Access to Public Records
13. Archival Advisory Board
14. Functions of the Board
15. Power of the Director to lay down norms and standards for courses in archival science
16. Protection of action taken in good faith

17. Power to make rules

18. Power to remove difficulty

* * * *

## STATEMENT OF OBJECTS AND REASONS

**Amending Act 9 of 2011.-** It is considered necessary to enact the Karnataka Public Records Act, providing a provision to;-

(a) implement the suggestions of the Indian Historical Records Commission to prepare a legislation regarding the maintenance of public records on par with the public records Act of the Central Government within the prescribed time and implement the same;

(b) ensure that proper maintenance and preservation of the Government records in the State of Karnataka which will be useful in the day to day administration and to the persons conducting research;

(c) ensure proper procurement, maintenance, administration and preservation of records of District administration, Public undertakings, Corporations or Boards, Commissions or Committees and also to receive from private sources records of historical and national importance;

(d) constitute State Archival Advisory Board to advice State Government on matter relating to the maintenance and conservation of public records and other matters connected therewith or incidental thereto.

Hence, the Bill.

[L.A. Bill No. 6 of 2010, File No.Samvyashae 48 Shasana 2009]

[Entry 12 of List II and entry 12 of list III of the Seventh schedule to the constitution of India.]

* * * *

## KARNATAKA ACT NO. 9 OF 2011

*(First Published in the Karnataka Gazette Extra-ordinary on the ninth day of February 2011)*

## THE KARNATAKA STATE PUBLIC RECORDS ACT, 2010

*(Received the assent of the Governor on the fourth day of February, 2011)*

An Act to regulate the management, administration and preservation of public records of the State Government, State Public Sector Undertakings, Statutory bodies and corporations, commissions and committees constituted by the State Government and matters connected therewith or incidental thereto.

Be it enacted by the Karnataka State Legislature in the Sixty first year of the Republic of India as follows:-

**1. Short title and Commencement.-** (1) This Act may be called the Karnataka State Public Records Act, 2010.

(2) It shall come into force on such date as the State Government may, by notification in the Official Gazette, appoint.

**2. Definitions.-** In this Act, unless the context otherwise requires,-

(a) "Board" means the State Archival Advisory Board constituted under sub-section (1) of section 13;

(b) "Director" means the Director of Archives appointed by the State Government and includes any officer authorized by that Government to perform the duties of the Director;

(c) "Head of the Archives" means a person holding the charge of the Archives of the State;

(d) "Public records" includes,-

(i) any document, manuscript and file;

(ii) any microfilm, microfiche and facsimile copy of a document;

(iii) any reproduction of image or images embodied in such microfilm, whether enlarged or not; and

(iv) any other material produced by a computer or by any other device of any records creating agency.

(e) 'records creating agency' includes,-

(i) in relation to the State Government, any Ministry, Department or office of the State Government;

(ii) in relation to any statutory body or corporation wholly or substantially controlled or financed by the State Government or any commission or any committee constituted by the State Government, the offices of the said body, corporation, commission or committee;

(f) "Records Officer" means the officer nominated by the records creating agency under sub-section (1) of section 5;

(g) "State" means the State of Karnataka.

**3. Power of the State Government to co-ordinate, regulate and supervise operations connected with administration, management etc., of public records.-** (1) The State Government shall have the power to co-ordinate, regulate and supervise the operations connected with the administration, management, preservation, selection, disposal and destroying of public records under this Act.

(2) The State Government in relation to the public records of the records creating agencies may, by order, authorize the Director of Archives subject to such conditions as may be specified in the order, to carry out all or any of the following functions, namely:-

(a) supervision, management and control of the Archives;

(b) acceptance for deposit of public records of permanent nature after such period as may be prescribed;

(c) custody, use and withdrawal of public records;

(d) arrangement, preservation and exhibition of public records;

(e) preparation of inventories, indices, catalogues and other reference media of public records;

(f) analyzing, developing, promoting and co-ordinating the standards, procedures and the techniques for improvement of the records management system;

(g) ensuring the maintenance, arrangement and security of public records in the Archives and in the office of the records creating agency;

(h) promoting utilization of available space and maintenance of equipments

for preserving public records;

(i) tendering advice to Records creating Agencies on the compilation, classification and disposal of records and application of standards, procedures and techniques of records management;

(j) survey and inspection of public records;

(k) organizing training programmes in various disciplines of Archives administration and records management;

(l) accepting records from any private source;

(m) regulating access to public records;

(n) receiving records from defunct bodies and making arrangement for securing public records in the event of national/State emergency;

(o) receiving reports on records management and disposal practices from the records officer;

(p) providing authenticated copies of, or extracts from public records;

(q) destroying or disposal of public records

(r) obtaining on lease or purchasing or accepting as gift any document of historical, State or national importance;

**4. Prohibition against taking of public records out of the State.-** No person shall take or cause to be taken out of the State any public records without the prior approval of the State Government.

**5. Records Officer.-** (1) Every Records creating agency shall nominate one of its officers as Records Officer to discharge the functions under this Act.

(2) Every Records Creating Agency may set up such number of record rooms in such places as it deems fit and shall place each record room under the charge of a Records Officer.

**6. Responsibilities of Records Officer.-** (1) The records officer shall be responsible for,-

(a) proper arrangement, maintenance and preservation of public records under his charge;

(b) periodical review of all public records and weeding out public records of ephemeral value;

(c) appraisal of public records which are more than twenty five years old in consultation with the State Archives with a view to retaining public records of permanent value;

(d) destruction of public records in such manner and subject to such

conditions as may be prescribed under sub-section (1) of section 8;

(e) compilation of a schedule of retention for public records in consultation with State Archives;

(f) periodical review for downgrading of classified public records in such manner as may be prescribed;

(g) adoption of such standards, procedures and techniques as may be recommended from time to time by the State Archives for improvement of record management system and maintenance of securing of public records.

(h) compilation of annual indices of public records.

(i) compilation of organizational history and annual supplement thereto;

(j) assisting the State Archives in public records management

(k) submission of annual reports to the Director in such manner as may be prescribed;

(l) transferring of records of any defunct body to the State Archives for preservation.

(2) The records officer shall act under the direction of the Director while discharging the responsibilities specified in sub-section (1).

**7. Records Officer to take appropriate action in the event of unauthorized removal, destruction etc., of Public Records in his custody.-** (1)The Records Officer shall, in the event of any unauthorized removal, destruction, defacement or alteration of any public records under his charge, forthwith take appropriate action for the recovery or restoration of such public records.

(2) The Records Officer shall submit a report in writing to the Director without any delay on any information of unauthorized removal, destruction, defacement or alteration of any public records under his charge and the action initiated by him and shall take action as he may deem necessary subject to the directions, if any given by the Director.

(3) The Records Officer may seek assistance from any Government officer or any other person for the purpose of recovery or restoration of public records and such officer or person shall render all assistance to the records officer.

**8. Destruction or disposal of public records.-** (1) No public record shall be destroyed or otherwise disposed of except in such manner and subject to such conditions as may be prescribed.

(2) No records, which is more than hundred years old shall be destroyed except where in the opinion of the Director, it is so defaced or is in such condition that it cannot be put to any archival use.

**9. Penalty for contraventions.-** Whoever contravenes any of the provisions of section 4 or section 8 shall be punishable with imprisonment for a term which may extend to five years or with fine which may extend to twentyfive thousand rupees or with both.

**10. Public records bearing security classification.-** No public records bearing security classification shall be transferred to the State Archives.

**11. Receipt of records from private sources.-** (1) The State Archives may accept any record of historical or national importance from any private source by way of gift, purchase or otherwise.

(2) The State Archives may in such manner and subject to such conditions as may be prescribed, make any record referred to in sub-section (1) available to any bona-fide research scholar.

**12. Access to Public Records.-** (1) All unclassified public records as are more than thirty years old and are transferred to the State Archives may be subject to such exceptions and restrictions as may be prescribed made available to any bona-fide research scholar.

***Explanation:-*** For the purposes of this sub-section, the period of thirty years shall be reckoned from the year of the opening of the public record.

(2) Any records creating agency may grant permission to any person to access to any public record in its custody in such manner and subject to such conditions as may be prescribed.

**13. Archival Advisory Board.-** (1) The State Government may, by notification in the Official Gazette, constitute an Archival Advisory Board for the purposes of this Act.

(2) The Board shall consist of the following members, namely:-

(a) Secretary to the Government incharge of culture - Chairman, Ex-officio;

(b) one officer not below the rank of Joint Secretary to Government of Karnataka, each from the departments of Personnel and Administrative Reforms, Finance, Law & Parliamentary Affairs and Legislation - Member, Ex-officio;

(c) three persons to be nominated by the State Government for a

period not exceeding three years,
one being an Archivist by profession
and two being professors in the
post-graduate Department of History
in any recognized Universities
from the State - Members

(d) Director of Archives - Member-Secretary, Ex-officio

(3) The members nominated under clause (c) of sub-section (2) shall be paid such allowances as may be prescribed.

**14. Functions of the Board.-** The Board shall perform the following functions, namely:-

(a) advise the State Government on matters concerning the administration, management, conservation and use of public records;

(b) lay down guidelines for training of Archivists;

(c) give directions for acquisition of records from private custody;

(d) deal with such other matters as may be prescribed.

**15. Power of the Director to lay down norms and standards for courses in archival science.-** The Director shall have the power to lay down norms, and standards for courses, curricula, assessment and examinations relating to the training in archival science and other ancillary subjects.

**16. Protection of action taken in good faith.-** No suit, prosecution or other legal proceedings shall lie against any person in respect of anything which is in good faith done or intended to be done in pursuance of this Act or the rules made there under.

**17. Power to make rules.-** (1) The State Government may, by notification in the Official Gazette, make rules to carry out the purposes of this Act.

(2) In particular and without prejudice to the generality of the foregoing power, such rules may provide for all or any of the following matters, namely:-

(a) the period after which public records of permanent nature may be accepted under clause (b) of sub-section (2) of section 3;

(b) the manner in which and the conditions subject to which public records can be destroyed under clause (d) of sub-section (1) of section 6;

(c) the manner in which periodical review of classified public records for downgrading shall be undertaken under clause (f) of sub-section (1) of section 6;

(d) the manner in which the records officer will report to the Director under

clause (k) of sub-section (1) of section 6;

(e) the manner in which and the conditions subject to which public records may be destroyed or disposed of under sub-section (1) of section 8;

(f) the manner in which and the conditions subject to which records of historical or national or State importance may be made available to research scholar under sub-section (2) of section 11;

(g) exceptions and restrictions subject to which public records may be made available to a research scholar under sub-section (1) of section 12;

(h) the allowances payable to members of the Board under sub-section (3) of section 13;

(i) the matters with respect to which the Board may perform its functions under clause (d) of section 14;

(j) any other matter which is required to be, or may be, prescribed.

(3) Every rule made under this Act shall be laid, as soon as may be after it is made, before each House of State Legislature while it is in session, for a total period of thirty days which may be comprised in one session or in two or more successive sessions, and if, before the expiry of the session immediately following the session or the successive sessions aforesaid, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done under that rule.

**18. Power to remove difficulty.-** (1) If any difficulty arises in giving effect to the provisions of this Act, the State Government may, by order published in the official Gazette, make such provisions, not inconsistent with the provisions of this Act, as appear to it to be necessary or expedient for removing the difficulty:

Provided that, no such order shall be made after the expiry of a period of two years from the date of commencement of this Act.

(2) Every order made under sub-section (1) shall be laid, as soon as may be, after it is made, before each House of the State Legislature.

The above translation of ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ, 2010 (2011ರ ಕರ್ನಾಟಕ ಅಧಿನಿಯಮ ಸಂಖ್ಯೆ 9) be published in the official Gazette under clause (3) of Article 348 of the Constitution of India.

H.R.BHARDWAJ

GOVERNOR OF KARNATAKA

By Order and in the name of the Governor of Karnataka

G.K. BOREGOWDA

Secretary to Government,
Department of Parliamentary Affairs & Legislation

* * * *

**2011ರ ಕರ್ನಾಟಕ ಅಧಿನಿಯಮ ಸಂಖ್ಯೆ 22**

# ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ, 2011

## ಪ್ರಕರಣಗಳ ಪಟ್ಟಿ

ಪ್ರಕರಣಗಳು:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವಿಲೀನ
4. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವಿಲೀನಕ್ಕೆ ಸಂಬಂಧಿಸಿದ ಪ್ರಕ್ರಿಯೆ
5. ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವೇತನ ನಿಗದಿ ಜ್ಯೇಷ್ಠತೆ ಹಾಗೂ ರಜೆ
6. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನ ನೇಮಕಾತಿಯ ನಿಷೇಧ
7. ಇತರ ನಿಯಮಗಳ ಅನ್ವಯ
8. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
9. ನಿರ್ದೇಶನ ಮುಂತಾದವುಗಳನ್ನು ನೀಡುವ ಅಧಿಕಾರ

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2011ರ ಅಧಿನಿಯಮ ಸಂಖ್ಯೆ 22.–** 2011–12ನೇ ಶೈಕ್ಷಣಿಕ ವರ್ಷದಿಂದ ವೃತ್ತಿ ಆಧಾರಿತ ಕೋರ್ಸುಗಳನ್ನು ಮುಚ್ಚುವುದರಿಂದಾಗಿ ಪದವಿಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸಲು ಶಾಸನವೊಂದನ್ನು ಅಧಿನಿಯಮಿಸುವುದು ಹಾಗೂ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವುದು ಕೂಡಾ ಅವಶ್ಯವೆಂದು ಪರಿಗಣಿಸಲಾಗಿದೆ,–

(1) ಸರ್ಕಾರಿ ವೃತ್ತಿ ಆಧಾರಿತ ಕೋರ್ಸುಗಳ ಸಂಸ್ಥೆಗಳಲ್ಲಿ ಐದು ವರ್ಷಗಳಿಗಿಚಿತ ಹೆಚ್ಚಾಗಿ ಅರೆಕಾಲಿಕ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಯಾವುದೇ ಸರ್ಕಾರಿ ಇಲಾಖೆಯ ಖಾಲಿ ಹುದ್ದೆಗಳಲ್ಲಿ ವಿಲೀನಗೊಳಿಸುವುದು.

(2) ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಐದು ವರ್ಷಗಳಿಗಿಂತ ಹೆಚ್ಚಾಗಿ ಅರೆಕಾಲಿಕ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು, ಯಾವುದೇ ಖಾಸಗಿ ಅನುದಾನಿತ ವೃತ್ತಿ ಆಧಾರಿತ ಕೋರ್ಸು ಸಂಸ್ಥೆಗಳ ಖಾಲಿ ಹುದ್ದೆಗಳಲ್ಲಿ ವಿಲೀನಗೊಳಿಸುವುದು.

(3) ಇದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ಕೆಲವು ಇತರ ವಿಷಯಗಳು.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ: 24, ಕಡತ ಸಂಖ್ಯೆ:ಸಂವ್ಯಶಾಇ 22 ಶಾಸನ 2011)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೇ ನಮೂದನೆ ಮತ್ತು 3ನೇ ಪಟ್ಟಿಯ 25ನೇ ನಮೂದನೆಯ ಅಡಿಯಲ್ಲಿ ಬರುತ್ತದೆ.)

* * * *

सत्यमेव जयते

**2011ರ ಕರ್ನಾಟಕ ಅಧಿನಿಯಮ ಸಂಖ್ಯೆ 22**

(2011ರ ಏಪ್ರಿಲ್ ಆರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ, 2011

(2011ರ ಏಪ್ರಿಲ್ ಎರಡನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

**ಕರ್ನಾಟಕ ರಾಜ್ಯದಲ್ಲಿನ ಪದವಿಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ರಾಜ್ಯದಲ್ಲಿನ ಪದವಿಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸಲು ಹಾಗೂ ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರ" ಎಂದರೆ,

ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 28 ಎಸ್‌ಬಿಸಿ 77, ದಿನಾಂಕ 4.3.1977 ಇಡಿ 64 ಟಿಪಿಯು 76, ದಿನಾಂಕ 12-07-77 ಮತ್ತು ಇಡಿ 19 ಡಿಜಿಡಿ 96 ದಿನಾಂಕ 09-03-99, 27-07-99 ಮತ್ತು 04-09-1999ರ

ಅನುಸಾರವಾಗಿ ಹಾಗೂ ಹಾಗೆ ಕಾರ್ಯನಿರ್ವಹಿಸಿರುವಂಥ ಮತ್ತು ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದಂಥ ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಂಥ ಕಾರ್ಯ ನಿರ್ವಹಿಸುತ್ತಿರುವಂಥವರನ್ನು, ಅರೆಕಾಲಿಕ ಅಥವಾ ಪೂರ್ಣಕಾಲಿಕದ ಆಧಾರದ ಮೇಲೆ ಸರ್ಕಾರಿ ಅಥವಾ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಮುಖ್ಯಸ್ಥರಿಂದ,–

(i) ವೃತ್ತಿ ಆಧಾರಿತ ಕೋರ್ಸುಗಳ ಬೋಧನಾ ಸಿಬ್ಬಂದಿಯಾಗಿ; ಅಥವಾ

(ii) ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯಕರ್ತ ಶಿಕ್ಷಕನಾಗಿ; ಅಥವಾ

(iii) ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಚೇರಿ ಸಹಾಯಕನಾಗಿ; ಅಥವಾ

(iv) ವೃತ್ತಿ ಆಧಾರಿತ ಕೋರ್ಸುಗಳಲ್ಲಿ 'ಡಿ' ದರ್ಜೆಯ ನೌಕರನಾಗಿ

–ನೇಮಕಗೊಂಡಿದ್ದ ವ್ಯಕ್ತಿ.

(ಬಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

**3. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವಿಲೀನ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಹೊರತುಪಡಿಸಿ, ಈ ಪ್ರಕರಣದ ಅಡಿಯಲ್ಲಿ ಸರ್ಕಾರವು ಯಾರ ಹೆಸರನ್ನು ಅಧಿಸೂಚಿಸಿದೆಯೋ ಆ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು, ಒಂದು ಸಲದ ಕ್ರಮವಾಗಿ, ಈ ಮುಂದೆ ಹೇಳಿದಂತೆ, ರಾಜ್ಯದ ಮೀಸಲಾತಿ ಕಾರ್ಯನೀತಿಗೆ ಅನುಸಾರ, ಅದರಲ್ಲಿ ನಿರ್ದಿಷ್ಟಪಡಿಸಿರಬಹುದಾದಂತೆ, ಪದವಿಪೂರ್ವ ಶಿಕ್ಷಣ ಸೇವೆಯಲ್ಲಿ, ಸಮಾನ ಖಾಲಿ ಹುದ್ದೆಯ ಹಾಗೂ ಸೇವೆಯ ಅಂಥ ಪ್ರವರ್ಗದಲ್ಲಿ ವಿಲೀನವನ್ನು ಪರಿಗಣಿಸತಕ್ಕದ್ದು:

ಪರಂತು, ಪದವಿಪೂರ್ವ ಶಿಕ್ಷಣ ಸೇವೆಯಲ್ಲಿ ಸಾಕಷ್ಟು ಸಂಖ್ಯೆಯ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದಲ್ಲಿ, ಸರ್ಕಾರವು, ಇತರೆ ಇಲಾಖೆಗಳಲ್ಲಿ ಲಭ್ಯವಿರುವ ಸಮಾನ ಹುದ್ದೆಗಳ ಖಾಲಿ ಸ್ಥಾನಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದು ನಂತರ ಈ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಅಧಿಸೂಚಿಸತಕ್ಕದ್ದು:

ಮತ್ತೂ ಪರಂತು,–

(ಎ) ಯಾವೊಬ್ಬ, ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು ಆತನಿಗೆ ನೇರವಾಗಿ ಅನ್ವಯಿಸಬಹುದಾದಂಥ ಕಾರಣಗಳಿಗಾಗಿ ಆತನು ಯಾವುದೇ ಸೇವಾ ಭಂಗವಿಲ್ಲದೆ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನಾಗಿ ಕರ್ತವ್ಯವನ್ನು ನಿರ್ವಹಿಸಿದ್ದ ಹೊರತು, ಮೇಲಿನಂತೆ ವಿಲೀನಗೊಳಿಸತಕ್ಕದ್ದಲ್ಲ;

(ಬಿ) ಯಾವೊಬ್ಬ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು, ಸಂಬಂಧಿಸಿದ ನೇಮಕಾತಿಯ ಸೂಕ್ತ ನಿಯಮಗಳಡಿಯಲ್ಲಿ, ಆ ಹುದ್ದೆಗಾಗಿ ನಿಯಮಿಸಲಾದ ವಿದ್ಯಾರ್ಹತೆಯನ್ನು ತನ್ನ ವಿಲೀನದ ದಿನಾಂಕದಂದು ಆತನು ಹೊಂದಿರದ ಹೊರತು, ವಿಲೀನಗೊಳಿಸತಕ್ಕದ್ದಲ್ಲ;

(ಸಿ) ಮೀಸಲಾತಿಗೆ ಅಥವಾ ಯಾವುದೇ ಕಾನೂನು ಅಥವಾ ಯಾವುದೇ ಆದೇಶದ ಮೂಲಕ ಅಥವಾ ಅದರ ಅಡಿಯಲ್ಲಿನ ಉಪಬಂಧಗಳಿಗೆ ಅನುಸಾರವಾಗಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳ ಪೈಕಿ ಭರ್ತಿ ಮಾಡಬೇಕೆಂದು ಮೀಸಲಿರಿಸಿದ ಯಾವುದೇ ಹುದ್ದೆಗೆ ಪ್ರತಿಯಾಗಿ, ಈ ಅಧಿನಿಯಮದ ಅಡಿಯಲ್ಲಿ ವಿಲೀನಗೊಳಿಸಬೇಕಾದ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರಲ್ಲಿ ಅಂಥ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಾದ ಹೊರತು,

ನೇಮಕಾತಿಯನ್ನು ಮಾಡತಕ್ಕದ್ದಲ್ಲ, ಅನ್ಯಥಾ ಅಂಥ ಹುದ್ದೆಗಳನ್ನು ಈ ವರ್ಗಗಳಿಂದ ವಿಶೇಷ ನೇಮಕಾತಿ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಬೇಕಾದ ಬ್ಯಾಕ್‌ಲಾಗ್ ಹುದ್ದೆಗಳಂತೆ ಪರಿಗಣಿಸತಕ್ಕದ್ದು.

(2) ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಸಂದರ್ಭದಲ್ಲಿ, ಸರ್ಕಾರವು, ಯಾವುದೇ ಖಾಸಗಿ ಅನುದಾನಿತ ಸಂಸ್ಥೆಯಲ್ಲಿ ಲಭ್ಯವಿರುವ ಸೂಕ್ತ ಖಾಲಿ ಸ್ಥಾನಗಳಿಗೆ ಪ್ರತಿಯಾಗಿ ಅಥವಾ ಇನ್ನು ಮುಂದೆ ಉಂಟಾಗುವ ಖಾಲಿ ಸ್ಥಾನಗಳಿಗೆ ಪ್ರತಿಯಾಗಿ ಅರ್ಹ ವ್ಯಕ್ತಿಗಳನ್ನು ವಿಲೀನಗೊಳಿಸಿಕೊಳ್ಳಲು ಅನುದಾನಿತ ಸಂಸ್ಥೆಗಳಿಗೆ ನಿರ್ದೇಶನ ನೀಡಬಹುದು.

**4. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವಿಲೀನಕ್ಕೆ ಸಂಬಂಧಿಸಿದ ಪ್ರಕ್ರಿಯೆ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದಂಥ ಮತ್ತು ವಿಲೀನಕ್ಕೆ ಅರ್ಹರಾಗಿರುವಂಥ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಹೆಸರುಗಳನ್ನು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶಕ್ಕಾಗಿ ಅದು ಅವಶ್ಯಕವೆಂದು ಭಾವಿಸಬಹುದಾದ ಅಂಥ ಸದಸ್ಯರ ಸಂಖ್ಯೆಯನ್ನು ಒಳಗೊಂಡ ಸಮಿತಿಯನ್ನು ರಚಿಸತಕ್ಕದ್ದು. ರಾಜ್ಯ ಸರ್ಕಾರವು, ಅಂಥ ಶಿಫಾರಸ್ಸನ್ನು ಸ್ವೀಕರಿಸಿದ ಮೇಲೆ, 3ನೇ ಪ್ರಕರಣದ ಅನುಸಾರವಾಗಿ ಸಮಿತಿಯು ಹಾಗೆ ಶಿಫಾರಸ್ಸು ಮಾಡಿದ ಹೆಸರುಗಳನ್ನು ಅಧಿಸೂಚಿಸತಕ್ಕದ್ದು.

(2) ಸರ್ಕಾರವು, ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಸಂಬಂಧದಲ್ಲಿ, ಪ್ರತ್ಯೇಕವಾಗಿ ಅಂಥ ಒಂದು ಸಮಿತಿಯನ್ನು ರಚಿಸತಕ್ಕದ್ದು.

(3) ಸಮಿತಿಯು, ತನ್ನ ಸ್ವಂತ ಕಾರ್ಯವಿಧಾನವನ್ನು ನಿರ್ಧರಿಸತಕ್ಕದ್ದು.

(4) ಅರ್ಹ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಹೆಸರುಗಳನ್ನು ಶಿಫಾರಸ್ಸು ಮಾಡುವ ಮತ್ತು ಅಂಥ ಹೆಸರುಗಳನ್ನು ಅಧಿಸೂಚಿಸುವ ಇಡೀ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಒಳಗೆ ಪೂರ್ಣಗೊಳಿಸತಕ್ಕದ್ದು.

(5) ನೇಮಕಾತಿ ಪ್ರಾಧಿಕಾರವು, (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ವ್ಯಕ್ತಿಗಳ ಪೂರ್ವ ವೃತ್ತಾಂತಗಳನ್ನು ಸತ್ಯಾಪನೆ ಮಾಡಿದ ತರುವಾಯ ಮತ್ತು ನೇಮಕಾತಿಯ ಸೂಕ್ತತೆಯನ್ನು ಪರಿಶೀಲಿಸಿದ ತರುವಾಯ, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ 10 ಮತ್ತು 12ನೇ ನಿಯಮಗಳಿಗನುಸಾರವಾಗಿ ಅಧಿಸೂಚಿಸಿದ ಸಮಾನ ಖಾಲಿ ಹುದ್ದೆಯಲ್ಲಿ ಅವರನ್ನು ವಿಲೀನಗೊಳಿಸತಕ್ಕದ್ದು:

ಪರಂತು, ಖಾಸಗಿ ಅನುದಾನಿತ ಸಂಸ್ಥೆಗಳ ಸಂಬಂಧದಲ್ಲಿ, ಅಂಥ ಸಂಸ್ಥೆಗಳಲ್ಲಿನ ನೇಮಕಾತಿ ಪ್ರಾಧಿಕಾರವು, ಆ ಸಂಸ್ಥೆಗಳಲ್ಲಿ ಲಭ್ಯವಿರುವ ಖಾಲಿ ಸ್ಥಾನಗಳಲ್ಲಿ ಅನುದಾನಿತ ಸಂಸ್ಥೆಗಳ ಅಧಿಸೂಚಿತ ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು.

**5. ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವೇತನ ನಿಗದಿ ಜ್ಯೇಷ್ಠತೆ ಹಾಗೂ ರಜೆ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಯಾವುದೇ ಇತರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ, ಈ ಅಧಿನಿಯಮದ ಅಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು, ಆತನು

ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಠಕ್ಕೆ ನಿಗದಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜ್ಯೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಖಾಸಗಿ ಅನುದಾನಿತ ಸಂಸ್ಥೆಗಳ ಸಂಬಂಧದಲ್ಲಿ, ಹಾಗೆ ನೇಮಕಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರು ಅನುದಾನಿತ ಸಂಸ್ಥೆಗಳಲ್ಲಿಯ ಅಂತಹುದೇ ಸೌಲಭ್ಯಗಳಿಗೆ ಅರ್ಹರಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ವಿಲೀನಗೊಂಡ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು, ಐದು ವರ್ಷಗಳು ಪೂರ್ಣಗೊಂಡ ದಿನಾಂಕದಿಂದ ಸದರಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಸೇವಾವಧಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು ಮತ್ತು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ಸೇವಾವಧಿಯು ಒಂದೇ ಆಗಿದ್ದಲ್ಲಿ, ವಯಸ್ಸು ಹೆಚ್ಚಾದ ವ್ಯಕ್ತಿಯನ್ನು ವಯಸ್ಸಿನಲ್ಲಿ ಕಿರಿಯನಾದಂಥ ವ್ಯಕ್ತಿಗಿಂತ ಹಿರಿಯನೆಂಬಂತೆ ಪರಿಗಣಿಸತಕ್ಕದ್ದು.

**6. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನ ನೇಮಕಾತಿಯ ನಿಷೇಧ.–** (1) ಈ ಅಧಿನಿಯಮವು ಆರಂಭವಾದ ದಿನಾಂಕದಂದು ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರದ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು, ಯಾವುದೇ ಸರ್ಕಾರಿ ಸೇವೆಯಲ್ಲಿ ಅಥವಾ ಯಾವುದೇ ಖಾಸಗಿ ಅನುದಾನಿತ ಸಂಸ್ಥೆಯಲ್ಲಿ ಮುಂದುವರೆಸತಕ್ಕದ್ದಲ್ಲ ಅಥವಾ ವಿಲೀನಗೊಳಿಸತಕ್ಕದ್ದಲ್ಲ.

(2) ಯಾವೊಬ್ಬ ವ್ಯಕ್ತಿಯನ್ನು, ಈ ಅಧಿನಿಯಮದ ಅಡಿಯಲ್ಲಿಯ ವಿಲೀನದ ಪ್ರಕ್ರಿಯೆಯು ಪೂರ್ಣಗೊಂಡ ದಿನಾಂಕದಂದು ಅಥವಾ ನಂತರ, ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನಾಗಿ ನೇಮಕ ಮಾಡತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ.

(3) (1) ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸಿ, ಅರೆಕಾಲಿಕ ಆಧಾರದ ಮೇಲೆ ಯಾವೊಬ್ಬ ವ್ಯಕ್ತಿಯನ್ನು ನೇಮಕ ಮಾಡುವ ಅಥವಾ ತೊಡಗಿಸುವ ಯಾವೊಬ್ಬ ವ್ಯಕ್ತಿಯು ಅಥವಾ ನೇಮಕಾತಿ ಪ್ರಾಧಿಕಾರವು, ದುರ್ನಡತೆಯ ಶಿಸ್ತಿನ ಕ್ರಮಕ್ಕೆ ಬದ್ಧವಾಗತಕ್ಕದ್ದು.

**7. ಇತರ ನಿಯಮಗಳ ಅನ್ವಯ.–** ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆಯೆಂದು ಭಾವಿಸಿದ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ವಿನಿಯಮಿಸುವ ಎಲ್ಲಾ ಇತರ ನಿಯಮಗಳು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರಿಗೆ ಅನ್ವಯವಾಗತಕ್ಕದ್ದು: 5

ಪರಂತು, ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿಯ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ಸಂಬಂಧದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಹಾಗೆ ವಿಲೀನಗೊಂಡ ವ್ಯಕ್ತಿಗಳು ಅನುದಾನಿತ ಸಂಸ್ಥೆಗಳ ನೌಕರರಿಗೆ ಅನ್ವಯವಾಗುವಂಥ ನಿಯಮಗಳಿಗೆ ಒಳಪಡತಕ್ಕದ್ದು.

**8. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕಾದ ಯಾವುದೇ ಕಾರ್ಯದಲ್ಲಿ ಲೋಪ ಎಸಗಿದಲ್ಲಿ ಸರ್ಕಾರಿ ಅಧಿಕಾರಿಗಳ ವಿರುದ್ಧ, ಯಾವುದೇ ದಾವೆ, ವ್ಯಾಜ್ಯ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**9. ನಿರ್ದೇಶನ ಮುಂತಾದವುಗಳನ್ನು ನೀಡುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು

ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತೊಂದರೆಗಳನ್ನು ನಿವಾರಿಸಲು ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವಂಥ ಉಪಬಂಧಗಳನ್ನು ರಚಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಕೆ.ಬೋರೇಗೌಡ

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

* * * *

## KARNATAKA ACT NO. 22 OF 2011

## THE KARNATAKA PART TIME JOB ORIENTED COURSE EMPLOYEES ABSORPTION ACT, 2011

### Arrangement of Sections

Sections:

1. Short title and commencement
2. Definitions
3. Absorption of the part time Job Oriented Course employee
4. Procedure for absorption of part time Job Oriented Course employee
5. Pay fixation, seniority and leave of part time Job Oriented Course employee absorbed under these rules
6. Prohibition of appointment of part time Job Oriented Course employee
7. Application of other rules
8. Protection of action taken in good faith
9. Power to issue direction etc

* * * *

### STATEMENT OF OBJECTS AND REASONS

**Act 22 of 2011.-** It is considered necessary to enact a legislation to absorb the part time Job Oriented Course employees working in the job oriented courses in Pre-university Education consequent upon the closer of Job Oriented Courses from the

academic year 2011-12 and also provide for,-

(1) absorption of the teaching and non teaching staff, who have worked for more than five years as part time employees in Government JOC Institutions, in vacant posts of any of the Government Department.

(2) absorption of the teaching and non teaching staff, who have worked for more than five years in Private Aided Institutions as part time employees, in vacant posts of any of the Private Aided JOC Institutions.

(3) certain other matters connected therewith or incidental thereto.

Hence the Bill.

[L.A. Bill No. 24 of 2011, File No.Samvyashae 22 Shasana 2011]

[Entry 41 of List II and entry 25 of List III of the Seventh schedule to the constitution of India.]

* * * *

## KARNATAKA ACT NO. 22 OF 2011

*(First published in the Karnataka Gazette Extra-ordinary on the Sixth day of April, 2011)*

## THE KARNATAKA PART TIME JOB ORIENTED COURSE EMPLOYEES ABSORPTION ACT, 2011

*(Received the assent of the Governor on the Second day of April, 2011)*

**An Act to provide for absorption of the part time Job Oriented Course employees working in the job oriented courses in Pre-university Education in the State of Karnataka.**

Whereas it is expedient to provide for absorption of part time Job Oriented Course employees working in the job oriented courses in Pre-university Education in the State and for the purposes hereinafter appearing;

Be it enacted by the Karnataka State Legislature in the Sixty Second year of the Republic of India, as follows:-

**1. Short title and commencement.-** (1) This Act may be called the Karnataka Part time Job Oriented Course Employees Absorption Act, 2011.

(2) It shall come into force at once.

**2. Definitions.-** In this Act, unless the context otherwise requires,-

(a) "Part time Job Oriented Course employee" means a person appointed,-

(i) as teaching staff of job oriented courses; or

(ii) as worker teacher in job oriented courses; or

(iii) as office Assistant in job oriented courses; or

(iv) as 'D' Group employees in job oriented courses

by the head of the Government or private aided Pre-university Colleges on part time or full time basis in accordance with G.O. No.DPAR 28 SBC 77, dt:4.3.1977, ED 64 TPU 76, dt:12.7.77 and ED 19 DGD 96 dt:9.3.99, 27.7.99 and 4.9.1999 and has worked as such and has completed five years of service and who is also working as such on the date of commencement of this Act.

(b) "Government" means the Government of Karnataka;

**3. Absorption of the part time Job Oriented Course employee.-** (1) Notwithstanding anything contained in any other law for the time being in force, the part time Job Oriented Course employees whose names are notified by the Government under this section, except those working in private aided institutions, shall be considered for absorption, on following the reservation policy of the State, in such category of equivalent vacant post and service in Pre-university Education service as may be specified therein, as a one time measure:

Provided that if sufficient number of vacant posts are not available in Pre-university Education service, the Government shall obtain the information regarding number of vacancies in equivalent posts available in other departments and then notify the eligible candidates to these posts:

Provided further that,-

(a) no part time Job Oriented Course employee shall be absorbed as above, unless he has discharged the duties of the post continuously as part time Job Oriented Course employee for not less than five years without any breaks in his service for the reasons which are directly attributable to him;

(b) no part time Job Oriented Course employee shall be absorbed unless he possessed the qualification prescribed for the post on the date of his absorption under the relevant rules of recruitment;

(c) the appointment shall not be made under this Act against any post earmarked to be filled from among candidates belonging to the Scheduled Castes or the Scheduled Tribes in accordance with the reservation or provided by or under any law or any order unless there are candidates belonging to those classes available from among the part time Job Oriented Course employees to be absorbed, otherwise such posts shall be treated as back-log to be filled by process of special recruitment from among these classes.

(2) In case of part time Job Oriented Course employees working in private aided institutions, the Government may direct the aided institutions to absorb the eligible persons against the suitable vacancies available or against the future vacancies in any private aided institutions.

**4. Procedure for absorption of part time Job Oriented Course employee.-** (1) The State Government shall constitute a Committee consisting of such number of members as it deems fit, for the purpose of recommending to the State Government, the names of part time Job Oriented Course employees, who fulfills the conditions specified in this Act and eligible for absorption. The State Government shall on receipt of such recommendation, notify the names so recommended by the Committee in accordance with section 3.

(2) The Government shall also constitute separately one such committee in respect of part time Job Oriented Course employees in private aided institutions.

(3) The Committee shall determine its own procedure.

(4) The entire process of recommendation of names of eligible part time Job Oriented Course employees and notifying such names shall as far as may be completed within one year from the date of commencement of this Act.

(5) The Appointing Authority shall after verifying the antecedents of the persons notified under sub-section (1) and after verifying the suitability for appointment shall absorb him in the notified equivalent vacant post in accordance with rules 10 and 12 of the Karnataka Civil Services (General Recruitment) Rules, 1977:

Provided that in respect of private aided institutions, the Appointing Authority in such institutions shall appoint the notified persons of aided institutions in the vacancies available in those institutions.

**5. Pay fixation, seniority and leave of part time Job Oriented Course employee absorbed under these rules.-** (1) Notwithstanding anything contained in any other law for the time being in force or any other rules governing conditions of service made or deemed to have been made under the Karnataka State Civil Services Act, 1978 (Karnataka Act 14 of 1990), the initial basic pay of an absorbed part time Job Oriented Course employees, under this Act after he reports to duty, shall be fixed at the minimum of the time scale of pay of the category of post in which he is absorbed and the services rendered before his absorption shall not be counted for the purposes of pay, seniority and leave or pension:

Provided that in respect of private aided institutions, the part time Job Oriented Course employees so appointed shall be eligible for similar benefits in aided institutions.

(2) The inter-se seniority of the persons absorbed under this Act shall be determined according to the length of service of the said part time Job Oriented

Course employee from the date of completion of five years, and if the length of service of two or more persons is same, the older in age is treated as senior to the person who is younger in age.

**6. Prohibition of appointment of part time Job Oriented Course employee.-** (1) The part time Job Oriented Course employee who has not completed five years of service on the date of commencement of this Act shall not be continued or absorbed in any of the Government service or any private aided Institutions.

(2) No person shall be appointed or continued as part time Job Oriented Course employee on or after the date of completion of process of absorption under this Act.

(3) Any person or Appointing Authority appointing or engaging any person on part time basis by contravening the provisions of sub-sections (1) and (2) shall be liable for strict disciplinary action as misconduct.

**7. Application of other rules.-** The Karnataka Civil Services Rules, the Karnataka Civil Services (Conduct) Rules, 1966 and all other rules regulating the conditions of services of Government servants made or deemed to have been made under the Karnataka State Civil Services Act, 1978 (Karnataka Act 14 of 1990) shall, in so far as they are not inconsistent with the provisions of this Act, be applicable to the part time Job Oriented Course employees who get absorbed in Government under this Act:

Provided that in respect of part time Job Oriented Course employees in private aided institutions, the persons so absorbed under this Act shall be governed by such rules that are applicable to the aided institution employees.

**8. Protection of action taken in good faith.-** No suit, prosecution or other legal proceedings shall lie against the officers of the Government for anything done or omitted to be done in good faith under this Act.

**9. Power to issue direction etc.,-** If any difficulty arises in giving effect to the provisions of this Act, the Government may, by general or special order, make such provisions not inconsistent with the provisions of this Act as it appears to be necessary or expedient to remove the difficulty.

The above translation of the ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ ಸಂಖ್ಯೆ: 22) be published in the Official Gazette under clause (3) of Article 348 of the Constitution of India.

H.R. BHARDWAJ
GOVERNOR OF KARNATAKA

By order and in the name of the Governor of Karnataka,
G.K. BOREGOWDA

Secretary to Government
Department of Parliamentary Affairs and Legislation

* * * *

**2011ರ ಕರ್ನಾಟಕ ಅಧಿನಿಯಮ ಸಂಖ್ಯೆ 23**

## ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2011

**ಪ್ರಕರಣಗಳ ಪಟ್ಟಿ**

ಪ್ರಕರಣಗಳು:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಏಕ ಸದಸ್ಯ ನಿಯಂತ್ರಕ ಸಮಿತಿಯ ರಚನೆ
4. ಶುಲ್ಕದ ನಿಗದಿ
5. ಪ್ರವೇಶ ನಿಯಂತ್ರಣ ಮತ್ತು ಸೀಟು ಹಂಚಿಕೆ ಪ್ರಮಾಣ
6. ಈ ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳು ಅಸಿಂಧುವಾಗಿರುವುದು
7. ತೊಂದರೆಗಳನ್ನು ನಿವಾರಿಸುವ ಅಧಿಕಾರ
8. ನಿಯಮಗಳ ರಚನಾಧಿಕಾರ
9. ಪ್ರವೇಶಗಳು ಮತ್ತು ಶುಲ್ಕದ ಸಂಗ್ರಹಣೆಯ ಸಿಂಧುತ್ವ ಇತ್ಯಾದಿ

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2011ರ ಅಧಿನಿಯಮ ಸಂಖ್ಯೆ 23.–** ರಾಜ್ಯ ಸರ್ಕಾರ ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಶಿಕ್ಷಣ ನೀಡುತ್ತಿರುವ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಮಾಡಿಕೊಳ್ಳಲಾದ ಸಮ್ಮತಾಭಿಪ್ರಾಯದ ಒಪ್ಪಂದಕ್ಕೆ ಮಾನ್ಯತೆ ನೀಡುವುದಕ್ಕಾಗಿ ಮತ್ತು 2005 (6) ಎಸ್‌ಸಿಸಿ 537ರಲ್ಲಿ ವರದಿಯಾದ ಪಿ.ಎ. ಇನಾಂದಾರ್ ಮತ್ತು ಇತರರು–ವಿರುದ್ಧ–ಮಹಾರಾಷ್ಟ್ರ ರಾಜ್ಯ – ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂಧಿಸಲಾದಂಥ ಇತರ ವಿಷಯಗಳಿಗೆ ಉಪಬಂಧಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ರಾಜ್ಯ ಸರ್ಕಾರವು ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳೊಡನೆ 2008–09, 2009–10, 2010–11ನೇ ಶೈಕ್ಷಣಿಕ ವರ್ಷಗಳಿಗೆ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಮತ್ತು 2011–12ನೇ ಶೈಕ್ಷಣಿಕ ವರ್ಷಕ್ಕಾಗಿ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದವನ್ನು ಮಾಡಿಕೊಳ್ಳಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು 2008–09, 2009–10, 2010–11 ಮತ್ತು 2011–12ನೇ ಶೈಕ್ಷಣಿಕ ವರ್ಷಗಳಿಗಾಗಿ ತಡೆಹಿಡಿಯುವುದು ಅವಶ್ಯವೆಂದು ಅಭಿಪ್ರಾಯಪಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ:3, ಕಡತ ಸಂಖ್ಯೆ:ಸಂವ್ಯಶಾಇ 08 ಶಾಸನ 2011)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

* * * *

**2011ರ ಕರ್ನಾಟಕ ಅಧಿನಿಯಮ ಸಂಖ್ಯೆ 23**

(2011ರ ಏಪ್ರಿಲ್ ಆರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2011

(2011ರ ಏಪ್ರಿಲ್ ಎರಡನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

**ರಾಜ್ಯ ಸರ್ಕಾರ ಮತ್ತು ವೃತ್ತಿ ಶಿಕ್ಷಣ ಕೋರ್ಸ್‌ಗಳ ಶಿಕ್ಷಣ ನೀಡುತ್ತಿರುವ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಮಾಡಿಕೊಳ್ಳಲಾದ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಮಾನ್ಯತೆ ನೀಡುವುದಕ್ಕಾಗಿ ಮತ್ತು 2005 (6) ಎಸ್‌ಸಿಸಿ 537 ರಲ್ಲಿ ವರದಿಯಾದ ಪಿ.ಎ. ಇನಾಂದಾರ್ ಮತ್ತು ಇತರರು – ವಿರುದ್ಧ – ಮಹಾರಾಷ್ಟ್ರ ರಾಜ್ಯ– ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂಧಿಸಲಾದಂಥ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.**

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತು ರಾಜ್ಯ ಸರ್ಕಾರವು, ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ 2008–09, 2009–10, 2010–11 ವರ್ಷದಲ್ಲಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳೊಡನೆ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಂಡಿರುವುದರಿಂದ ಮತ್ತು 2011–12ನೇ ವರ್ಷದಲ್ಲಿ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಳ್ಳಲು ಉದ್ದೇಶಿಸಿರುವುದರಿಂದ ಮತ್ತು 2008–09, 2009–10, 2010–11 ಮತ್ತು 2011–12ನೇ ಶೈಕ್ಷಣಿಕ ವರ್ಷಗಳಿಗಾಗಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು (2006ರ ಕರ್ನಾಟಕ ಅಧಿನಿಯಮ 8) ತಡೆಹಿಡಿಯಬೇಕೆಂದು ಅಭಿಪ್ರಾಯ ಪಟ್ಟಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು 2008ರ ಜೂನ್ 1ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(3) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006 ರಲ್ಲಿ (2006ರ ಕರ್ನಾಟಕ ಅಧಿನಿಯಮ 8) ಏನೇ ಒಳಗೊಂಡಿದ್ದರೂ 2008–09, 2009–10, 2010–11 ಮತ್ತು 2011–12ನೇ ಶೈಕ್ಷಣಿಕ ವರ್ಷಕ್ಕಾಗಿ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶಗಳು ಮತ್ತು ಶುಲ್ಕ ನಿಗದಿ ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ನಡೆಯತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,–

(ಎ) "ಸಾಮಾನ್ಯ ಪ್ರವೇಶ ಪರೀಕ್ಷೆ" ಎಂದರೆ, ಏಕಗವಾಕ್ಷಿ ಪ್ರಕ್ರಿಯೆಯ ಮೂಲಕ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ ಅಭ್ಯರ್ಥಿಗಳ ಅರ್ಹತೆ (ಮೆರಿಟ್) ಯನ್ನು ನಿರ್ಧರಿಸುವುದಕ್ಕಾಗಿ ನಡೆಸಲಾಗುವ ಪರೀಕ್ಷೆ ಮತ್ತು ತರುವಾಯದ ಕೇಂದ್ರೀಯ ಕೌನ್ಸೆಲಿಂಗ್ ವ್ಯವಸ್ಥೆ;

(ಬಿ) "ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ಒಂದು ಏಜನ್ಸಿ;

(ಸಿ) "ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ" ಎಂದರೆ, ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಮತ್ತು ಶುಲ್ಕನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘ ತಮ್ಮ ನಡುವೆ ಮಾಡಿಕೊಳ್ಳಬಹುದಾದ ಯಾವುದೇ ಒಪ್ಪಂದ;

(ಡಿ) "ಸಂಸ್ಥೆ" ಎಂದರೆ, ವೃತ್ತಿ ಶಿಕ್ಷಣ ಕೋರ್ಸ್‌ಗಳ ವಿದ್ಯಾಭ್ಯಾಸ ನೀಡುತ್ತಿರುವ ವೃತ್ತಿ ಶಿಕ್ಷಣ ಸಂಸ್ಥೆಗಳು;

(ಇ) "ಏಕ ಸದಸ್ಯ ನಿಯಂತ್ರಕ ಸಮಿತಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಸಮಿತಿ;

(ಎಫ್) "ವೃತ್ತಿ ಶಿಕ್ಷಣ ಕೋರ್ಸುಗಳು" ಎಂದರೆ,–

(I) ವೈದ್ಯಕೀಯ ಮತ್ತು ದಂತ ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ,

(ಎ) ಬ್ಯಾಚುಲರ್ ಆಫ್ ಮೆಡಿಸಿನ್ ಮತ್ತು ಬ್ಯಾಚುಲರ್ ಆಫ್ ಸರ್ಜರಿ; ಮತ್ತು

(ಬಿ) ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ

(II) ಇಂಜಿನಿಯರ್ ಸಂಸ್ಥೆಗಳಲ್ಲಿ,

(ಎ) ಬ್ಯಾಚುಲರ್ ಆಫ್ ಇಂಜಿನಿಯರಿಂಗ್;

(ಬಿ) ಬ್ಯಾಚುಲರ್ ಆಫ್ ಟೆಕ್ನಾಲಜಿ

(ಸಿ) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್;

(III) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಕೋರ್ಸುಗಳು.

(ಜಿ) "ಅನುದಾನಿತವಲ್ಲದ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸದ ಯಾವುದೇ ಖಾಸಗಿ ಆಡಳಿತವುಳ್ಳ ವೃತ್ತಿಶಿಕ್ಷಣ ಸಂಸ್ಥೆ.

**3. ಏಕ ಸದಸ್ಯ ನಿಯಂತ್ರಕ ಸಮಿತಿಯ ರಚನೆ.–** ರಾಜ್ಯದ ಯಾವುದೇ ವಿಶ್ವವಿದ್ಯಾಲಯದ ಮಾಜಿ ಕುಲಪತಿಯವರು ಸದಸ್ಯರಾಗಿರುವ, ರಾಜ್ಯ ಸರ್ಕಾರವು ನೇಮಿಸಿದ ಒಂದು ಏಕ ಸದಸ್ಯ ನಿಯಂತ್ರಕ ಸಮಿತಿಯು ಇರತಕ್ಕದ್ದು. ಸದರಿ ಏಕಸದಸ್ಯ ನಿಯಂತ್ರಕ ಸಮಿತಿಯು, ವೃತ್ತಿಶಿಕ್ಷಣ ಕೋರ್ಸುಗಳಿಗೆ ಪ್ರವೇಶದ ಮತ್ತು ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದದ ಅನುಷ್ಠಾನದ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

**4. ಶುಲ್ಕದ ನಿಗದಿ.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಬಂಧದಲ್ಲಿ ನಿಗದಿಪಡಿಸಿದ ಶುಲ್ಕ ಏನೇ ಇದ್ದರೂ, ರಾಜ್ಯ ಸರ್ಕಾರವು, ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದ ಅನುಸಾರವಾಗಿ, ಅಧಿಸೂಚನೆಯ ಮೂಲಕ, ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಸಂದಾಯಮಾಡಬೇಕಾದ ಶುಲ್ಕವನ್ನು ನಿಗದಿಗೊಳಿಸಬಹುದು. ಬೇರೆ ಬೇರೆ ಪ್ರವರ್ಗದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಶುಲ್ಕದ ದರವನ್ನು ನಿಗದಿಗೊಳಿಸಬಹುದು.

**5. ಪ್ರವೇಶ ನಿಯಂತ್ರಣ ಮತ್ತು ಸೀಟು ಹಂಚಿಕೆ ಪ್ರಮಾಣ.–** ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ, ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳನ್ನು ಈ ಮುಂದಿನ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು, ಎಂದರೆ:–

(I) (i) 2008–09ನೇ ಶೈಕ್ಷಣಿಕ ವರ್ಷಕ್ಕಾಗಿ ಪ್ರವೇಶಾವಕಾಶವಿರುವ ಒಟ್ಟು ಸೀಟುಗಳ ಪೈಕಿ,–

(ಎ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡ ಐವತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು; ಮತ್ತು

(ಬಿ) ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ನಲವತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು,

(ಸಿ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ನಲವತ್ತರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು; ಮತ್ತು

(ಡಿ) ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು,

(ಇ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ದಂತವೈದ್ಯಕೀಯ ಕೋರ್ಸುಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಮೂವತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು;

(ಎಫ್) ಅಲ್ಪ ಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ದಂತ ವೈದ್ಯಕೀಯ ಕೋರ್ಸುಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು;

(ii) 2009-10ನೇ ಶೈಕ್ಷಣಿಕ ವರ್ಷಕ್ಕಾಗಿ ಪ್ರವೇಶಾವಕಾಶವಿರುವ ಒಟ್ಟು ಸೀಟುಗಳ ಪೈಕಿ,-

(ಎ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡ ಐವತ್ತರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು; ಮತ್ತು

(ಬಿ) ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ನಲವತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು, 5

(ಸಿ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ನಲವತ್ತೆರಡರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು; ಮತ್ತು

(ಡಿ) ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೇಳರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು,

(ಇ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ದಂತವೈದ್ಯಕೀಯ ಕೋರ್ಸುಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಮೂವತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು;

(ಎಫ್) ಅಲ್ಪ ಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ದಂತ ವೈದ್ಯಕೀಯ ಕೋರ್ಸುಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು;

(iii) 2010-11ನೇ ಶೈಕ್ಷಣಿಕ ವರ್ಷಕ್ಕಾಗಿ ಪ್ರವೇಶಾವಕಾಶವಿರುವ ಒಟ್ಟು ಸೀಟುಗಳ ಪೈಕಿ,-

(ಎ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡ ಐವತ್ತರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು; ಮತ್ತು

(ಬಿ) ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ನಲವತ್ತರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು,

(ಸಿ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ನಲವತ್ತೆರಡರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು; ಮತ್ತು

(ಡಿ) ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ವೈದ್ಯಕೀಯ ಕೋರ್ಸ್‌ಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೇಳರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು,

(ಇ) ಅಲ್ಪಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ದಂತವೈದ್ಯಕೀಯ ಕೋರ್ಸುಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಮೂವತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು;

(ಎಫ್) ಅಲ್ಪ ಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ದಂತ ವೈದ್ಯಕೀಯ ಕೋರ್ಸುಗಳಲ್ಲಿ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೈದರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು;

(ಜಿ) ಅಲ್ಪಸಂಖ್ಯಾತರ ಮತ್ತು ಅಲ್ಪ ಸಂಖ್ಯಾತರದಲ್ಲದ ಸಂಸ್ಥೆಗಳು ನಡೆಸುತ್ತಿರುವ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಕೋರ್ಸುಗಳಲ್ಲಿ ಒಟ್ಟು ಸೀಟುಗಳ

ಶೇಕಡಾ ಇಪ್ಪತ್ತರಷ್ಟಕ್ಕೆ ಕಡಿಮೆಯಲ್ಲದಷ್ಟನ್ನು,

(iv) 2011-12ನೇ ವರ್ಷಕ್ಕೆ, ಸರ್ಕಾರವು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದಡಿಯಲ್ಲಿ ಒಪ್ಪಬಹುದಾದಂಥ ಸಂಖ್ಯೆಯ ಸೀಟುಗಳನ್ನು;

– ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಆಯ್ಕೆ ನಿಯಮಗಳು, 2006ಕ್ಕೆ ಅನುಸಾರವಾಗಿ ಸರ್ಕಾರಿ ಸಾಮಾನ್ಯ ಪ್ರವೇಶ ಪರೀಕ್ಷೆ ಘಟಕದ ಮೂಲಕ ತುಂಬತಕ್ಕದ್ದು.

(II) ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದಲ್ಲಿ ಅನ್ಯಥಾ ನಿರ್ದಿಷ್ಟಪಡಿಸಿದ ಹೊರತು, ಉಳಿದ ಸೀಟುಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ನಿರ್ಧರಿಸಲಾದ ಅರ್ಹತೆಯ ಆಧಾರದ ಮೇಲೆ ನ್ಯಾಯಯುತ ಹಾಗೂ ಪಾರದರ್ಶಕ ರೀತಿಯಲ್ಲಿ ಸಂದರ್ಭಾನುಸಾರ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘ ಅಥವಾ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳ ಸಂಘ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ

ಹಾಗೂ ತರುವಾಯ ನಡೆಸಲಾಗುವ ಕೇಂದ್ರೀಯ ಕೌನ್ಸಿಲಿಂಗ್ ಮೂಲಕ ತುಂಬತಕ್ಕದ್ದು.

(2) ರಾಜ್ಯಸರ್ಕಾರದ ಮೀಸಲಾತಿ ನೀತಿ ಮತ್ತು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು ವಿವಿಧ ಪ್ರವರ್ಗದ ಸಂಸ್ಥೆಗಳ ಸಂಬಂಧದಲ್ಲಿ ವಿವಿಧ ಪ್ರವರ್ಗದ ವಿದ್ಯಾರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದವರು ಹಾಗೂ ಆಡಳಿತ ಮಂಡಳಿಯವರು ತುಂಬಬೇಕಾದ ಸೀಟುಗಳ ಹಂಚಿಕೆ ಪ್ರಮಾಣವನ್ನು ಅಧಿಸೂಚನೆಯ ಮೂಲಕ ಪ್ರಕಟಿಸಬಹುದು.

**6. ಈ ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳು ಅಸಿಂಧುವಾಗಿರುವುದು.–** ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದವನ್ನು ಉಲ್ಲಂಘಿಸಿ ಯಾವುವೇ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು 2008-09, 2009-10, 2010-11 ಮತ್ತು 2011-12ನೇ ಶೈಕ್ಷಣಿಕ ವರ್ಷಕ್ಕಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ಮಾಡಿದ ಎಲ್ಲ ಪ್ರವೇಶಗಳು ಅಸಿಂಧುವಾಗಿರತಕ್ಕದ್ದು. ಅಂಥ ಉಲ್ಲಂಘನೆಯ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಂಥ ಪ್ರವೇಶಗಳನ್ನು ಅಥವಾ ಸಂದರ್ಭಾನುಸಾರ ಅಂಥ ಸಂಸ್ಥೆಯ ಸಂಯೋಜನೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

**7. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.

**8. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ

ಅಧಿವೇಶನದಲ್ಲಿರುವಾಗ, ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**9. ಪ್ರವೇಶಗಳು ಮತ್ತು ಶುಲ್ಕದ ಸಂಗ್ರಹಣೆಯ ಸಿಂಧುತ್ವ ಇತ್ಯಾದಿ.–** ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ವೃತ್ತಿ ಶಿಕ್ಷಣ ಸಂಸ್ಥೆಗಳು ಅಥವಾ ರಾಜ್ಯ ಸರ್ಕಾರವು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಅಥವಾ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ 2008ರ ಜೂನ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಮಾಡಿದ ಅಥವಾ ಮಾಡಲಾಗಿದೆ ಎಂದು ಭಾವಿಸಲಾದ ಎಲ್ಲಾ ಪ್ರವೇಶಗಳು ಅಥವಾ ಸಂಗ್ರಹಿಸಿದ ಶುಲ್ಕವನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಂಥ ಪ್ರವೇಶಗಳನ್ನು ಅಥವಾ ಶುಲ್ಕದ ಸಂಗ್ರಹಣೆಯನ್ನು ಮಾಡಲಾಗಿದ್ದರೆ, ಹೇಗೋ ಹಾಗೆ ಸಿಂಧುವಾಗಿರತಕ್ಕದ್ದು.

(ಎ) ವೃತ್ತಿ ಶಿಕ್ಷಣ ಸಂಸ್ಥೆಗಳಿಂದ ಅಥವಾ ಪ್ರವೇಶಗಳು ಮತ್ತು ಶುಲ್ಕಗಳ ಸಂಗ್ರಹಣೆಯ ಸಂಬಂಧದಲ್ಲಿ ರಾಜ್ಯ ಸರ್ಕಾರವು ಕೈಗೊಂಡ ಅಥವಾ ನಡೆಸಿದ ಎಲ್ಲ ಕ್ರಮಗಳು, ವ್ಯವಹರಣೆಗಳು ಅಥವಾ ಕಾರ್ಯಗಳನ್ನು, ಕಾನೂನಿನ ಪ್ರಕಾರ ಕೈಗೊಳ್ಳಲಾಗಿದೆ ಮತ್ತು ನಡೆಸಲಾಗಿದೆ ಎಂದು ಮತ್ತು ಯಾವಾಗಲೂ ಹಾಗೆ ಕೈಗೊಳ್ಳಲಾಗಿದೆ ಅಥವಾ ನಡೆಸಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ಶುಲ್ಕದ ಮರುಪಾವತಿಗಾಗಿ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ಅಂಥ ಶುಲ್ಕದ ಮರುಪಾವತಿಗೆ ನಿರ್ದೇಶಿಸಿ ಯಾವ ನ್ಯಾಯಾಲಯವೂ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ.ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

* * * *

## KARNATAKA ACT No. 23 OF 2011

## THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND FIXATION OF FEE) (SPECIAL PROVISIONS) ACT, 2011

### Arrangement of Sections

Sections:

1. Short title, commencement and application
2. Definitions
3. Constitution of One Man Regulatory Committee
4. Fixation of fee
5. Regulation of admission and seat matrix
6. Invalidation of admissions made in violation of this Act
7. Power to remove difficulties
8. Power to make rules
9. Validation of admissions and collection of fee

* * * *

### STATEMENT OF OBJECTS AND REASONS

**Act 23 of 2011.-** A Bill to provide for recognition of the consensual agreement entered into between the State Government and the Private Unaided Educational Institutions imparting Professional Educational Courses and for other matters, as provided in the judgment of the Supreme Court of India in P.A. Inamdar and others Vs. State of Maharashtra reported in 2005(6) SCC 537.

Whereas the State Government, to protect the interest of the students of

Karnataka domicile and students belonging to educationally and socially backward classes, for the academic year 2008-09, 2009-10, and 2010-11 have entered into such consensual arrangement or agreement and has proposed to enter in to consensual arrangement or agreement for the year 2011-12 with the Private Unaided Professional Educational Institutions and felt necessary that the Karnataka Professional Educational Institutions (Regulation of Admission and Determination of Fee) Act, 2006 be kept in abeyance for the academic years 2008-09, 2009-10, 2010-11 and 2011-12.

Hence, the Bill.

[L.C. Bill No. 03 of 2011, File No.Samvyashae 8 Shasana 2011]

[Entry 25 of List III of the Seventh schedule to the constitution of India.]

* * * *

## KARNATAKA ACT No. 23 OF 2011

*(First published in the Karnataka Gazette Extra-ordinary on the Sixth day of April, 2011)*

## THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND FIXATION OF FEE) (SPECIAL PROVISIONS) ACT, 2011

*(Received the assent of the Governor on the Second day of April, 2011)*

**An Act to provide for recognition of the consensual arrangement or agreement entered into between the State Government and the Private Unaided Educational Institutions imparting Professional Educational Courses and for other matters, as provided in the judgment of the Supreme Court of India in P.A. Inamdar and others Vs. State of Maharashtra reported in 2005(6) SCC 537.**

Whereas the State Government, to protect the interest of the students of Karnataka domicile and students belonging to educationally and socially backward classes, have entered into a consensual arrangement or agreement with the Private Unaided Professional Educational Institutions for the years 2008-09, 2009-10, 2010-11 and has proposed to enter into a consensual arrangement or agreement for the year 2011-2012 and felt that the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006) be kept in abeyance for the academic years 2008-09, 2009-10, 2010-11 and 2011-12 and for the purposes hereinafter appearing;

Be it enacted by the Karnataka State Legislature in the sixty second year of the Republic of India, as follows:-

**1. Short title, commencement and application.-** (1) This Act may be called the Karnataka Professional Educational Institutions (Regulation of Admission and Fixation of Fee) (Special Provisions) Act, 2011.

(2) It shall be deemed to have come into force with effect from 1st day of June, 2008.

(3) Notwithstanding anything contained in the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006), admissions and fixation of fee in an un-aided Private Professional Educational Institution for the academic years 2008-09, 2009-10, 2010-11 and 2011-12 shall be governed by the provisions of this Act.

**2. Definitions.-** In this Act, unless the context otherwise requires,-

(a) "Common Entrance Test" means the entrance test conducted for determination of merit of the candidates followed by centralized counseling for the purpose of admission to professional educational courses through a single window procedure;

(b) "Common Entrance Test Cell" means the agency of the State Government which conducts the common entrance test;

(c) "Consensual arrangement or agreement" means any agreement that may be entered into between the State Government and association of unaided Private Professional Educational Institutions relating to admission and fixation of fee in professional courses;

(d) "Institution" means Professional Educational Institutions offering Professional Educational courses;

(e) "One Man Regulatory Committee" means the Committee constituted by the State Government under section 3;

(f) "Professional Educational Courses" means,-

(I) In Medical and Dental Institutions,-

(a) Bachelor of Medicine and Bachelor of Surgery; and

(b) Bachelor of Dental Surgery.

(II) In Engineering Institutions,

(a) Bachelor of Engineering;

(b) Bachelor of Technology;

(c) Bachelor of Architecture; and

(III) such other courses as may be notified by the State Government

(g) "Unaided institution" means any privately managed professional educational institution, which is not receiving aid or grant-in-aid from the

State Government.

**3. Constitution of One Man Regulatory Committee.-**There shall be a One-Man Regulatory Committee appointed by the State Government, who shall be a former Vice-Chancellor of any University in the State. The said One-Man Regulatory Committee shall oversee the admission to professional courses and the implementation of the consensual arrangement or agreement.

**4. Fixation of fee.-** Notwithstanding the fee fixed in respect of Professional Educational Institutions which are in force on the date of commencement of this Act, the State Government may, in accordance with the consensual arrangement or agreement, by notification, fix the fee payable for admission to the Unaided Private Professional Educational Institutions. Different rates of fees may be fixed for different categories of students.

**5. Regulation of admission and seat matrix.-** (1) For effective implementation of the consensual arrangement or agreement, seats in a Private Unaided Professional Educational Institution shall be filled in the following manner, namely:-

(I) (i) Out of the total intake of seats for the academic year 2008-09,-

(a) in non-minority institution offering Engineering courses not less than, fifty five percent of total seats;

(b) in minority institution offering Engineering courses not less than forty five percent of total seats;

(c) in non-minority institution offering Medical courses not less than forty percent of total seats;

(d) in minority institution offering Medical courses not less than twenty five percent of total seats;

(e) in non-minority institution offering Dental courses not less than thirty five percent of total seats;

(f) in minority institution offering Dental courses not less than twenty five percent of total seats;

(ii) Out of the total intake of seats for the academic year 2009-10,-

(a) in non-minority institution offering Engineering courses not less than, fifty percent of total seats;

(b) in minority institution offering Engineering courses not less than forty five percent of total seats;

(c) in non-minority institution offering Medical courses not less than forty two percent of total seats;

(d) in minority institution offering Medical courses not less than twenty seven percent of total seats;

(e) in non-minority institution offering Dental courses not less than thirty five percent of total seats;

(f) in minority institution offering Dental courses not less than twenty five percent of total seats;

(iii) Out of the total intake of seats for the academic year 2010-11,-

(a) in non-minority institution offering Engineering courses not less than, fifty percent of total seats;

(b) in minority institution offering Engineering courses not less than forty percent of total seats;

(c) in non-minority institution offering Medical courses not less than forty two percent of total seats;

(d) in minority institution offering Medical courses not less than twenty seven percent of total seats;

(e) in non-minority institution offering Dental courses not less than thirty five percent of total seats;

(f) in minority institution offering Dental courses not less than twenty five percent of total seats;

(g) in minority and non-minority institutions offering Indian System of medicine and Homeopathy not less than twenty percent of total seats;

(iv) for the year 2011-12 such number of seats as may be agreed to by the Government under the consensual arrangement or agreement;

shall be filled through the Common Entrance Test Cell in accordance with the Karnataka Selection of Candidates for Admission to Government seats in Professional Educational Institutions Rules, 2006.

(II) The remaining seats shall be filled through the Common Entrance Test conducted by the association of Private Professional Educational Institutions or the association of religious and linguistic minority institutions, as the case may be followed by centralized counseling, in a fair and transparent manner on the basis of merit determined subject to such rules as may be prescribed except otherwise specified in the consensual arrangement or agreement.

(2) Subject to reservation policy of the State Government and the consensual arrangement or agreement, the State Government may, by notification, publish the seat matrix to be filled by the Common Entrance Test Cell and the management, by different categories of students in respect of different categories of institutions.

**6. Invalidation of admissions made in violation of this Act.-**All admissions made in violation of the provisions of this Act or the consensual arrangement or

agreement by any Private Unaided Professional Educational Institutions for the academic years 2008-09, 2009-10,2010-11 and 2011-12 whether made before or after commencement of this Act shall be invalid. In case of such violation, the State Government may direct the concerned university to cancel such admissions or affiliation of such institution as the case may be.

**7. Power to remove difficulties.-**If any difficulty arises in giving effect to the provisions of this Act, the State Government may, by order published in the official Gazette, make provisions not inconsistent with the provisions of this Act as appear it to be necessary or expedient for removing the difficulty.

**8. Power to make rules.-** (1) The State Government may, by notification, in the official Gazette, make rules prospectively or retrospectively for carrying out the purposes of this Act.

(2) Every rule made under this Act shall be laid as soon as may be after it is made before each House of the State Legislature while it is in session for a total period of thirty days which may be comprised in one session or in two or more successive sessions, and if, before the expiry of the session immediately following the session or the successive sessions aforesaid, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule.

**9. Validation of admissions and collection of fee.-** Notwithstanding anything contained in any judgment, decree or order of any Court, Tribunal or other authority to the contrary, all admissions made or purporting to have been made or the fee collected with effect from the 1st day of June, 2008 in accordance with the consensual arrangement or agreement or the provisions of this Act by the Professional Educational Institutions or the State Government shall be and shall be deemed to be valid and effective as if such admission or collection of fee had been done or made under the provisions of this Act,-

(a) all acts, proceedings or things done or taken by the Professional Educational Institutions or by the State Government in connection with the admissions and collection of fee be deemed to be, and to have always been done or taken in accordance with law;

(b) no suit or other proceedings shall be maintained or continued in any Court or Tribunal or authority for the refund of any such fee;

(c) no Court shall enforce any decree or order directing the refund of any such fee.

The above translation of the ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ